4.ಯಕ್ಷಗಾನ ಆದಿಪರ್ವ

ಶ್ರೀಮನ್ಮಹಾಭಾರತದೊಳಗಣ ಯಕ್ಷಗಾನ ಆದಿಪರ್ವ
ಪುಸ್ತಕ: ಮಹಾಭಾರತ ಪ್ರಸಂಗಗಳು
ಲೇಖಕರು: ಅಜ್ಞಾತಕವಿ
ಪ್ರಕಾಶಕರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಸಂಪುಟ ಸಂಪಾದಕರು: ಜಿ. ಎಸ್. ಭಟ್

ಯಕ್ಷಗಾನ ಆದಿಪರ್ವ – ಪಾತ್ರ ವಿವರ

ಪಾಂಡುರಾಜ	ಕೌರವಾದಿಗಳು
ಕುಂತಿ	ದ್ರೋಣ
ಮಾದ್ರಿ	(ಅಶ್ವತ್ಥಾಮ)
ಕಿಂದಮ (ಋಷಿ)	ಕೃಪಾಚಾರ್ಯರ
ವೇದವ್ಯಾಸ	ದ್ರುಪದರಾಜ
ಧರ್ಮರಾಜ	ಧಷ್ಟದ್ಯುಮ್ನ
ಭೀಮ	ಹಿಡಿಂಬಾಸುರ
ಅರ್ಜುನ	ಹಿಡಿಂಬೆ (ಮಾಯಾಹಿಡಿಂಬೆ)
ನಕುಲ	ಘಟೋತ್ಕಚ
ಸಹದೇವ	ಬಕಾಸುರ
ಯಮಧರ್ಮರಾಜ	ಅಂಗಾರವರ್ಮ
ವಾಯುದೇವ	ಕೃಷ್ಣ
ಇಂದ್ರ	ಬಲರಾಮ
ಅಶ್ವಿನಿದೇವತೆಗಳು	ದ್ರೌಪದಿ
ಧೃತರಾಷ್ಟ್ರ	ಮಾಗಧ
ಗಾಂಧಾರಿ	
ಕೌರವಾದಿಗಳು	
ದ್ರೋಣ	
(ಅಶ್ವತ್ಥಾಮ)	
ಕೃಪಾಚಾರ್ಯರ	
ದ್ರುಪದರಾಜ	
ಹಿಡಿಂಬಾಸುರ	

ದೂರ್ವಾಸ, ಗೌತಮ, ವನಪಾಲಕರು, ಬೇಟೆಗಾರರು, ಸಖಿಯರು, ಬಾಗಿಲಭಟರು, ಕರ್ಣ, ಪುರೋಚನ, ತಿರುಪೆಯ ಹೆಂಗಸು, ಐವರು ಮಕ್ಕಳು, ಬ್ರಾಹ್ಮಣರು, ಡಂಗುರದವರು, ಅಮರಾಂಗನೆಯರು, ಸ್ವಯಂವರದಲ್ಲಿ ಭಾಗವಹಿಸುವ ರಾಜರುಗಳು.

ರಾಗ ಮಾರವಿ ಝಂಪೆತಾಳ

ಶರಣು ಗೌರಿಯ ಪುತ್ರ । ಶರಣು ರವಿಶಶಿ ನೇತ್ರ ॥
ಶರಣು ಕೋಮಲಗಾತ್ರ । ಶರಣು ಸುಚರಿತ್ರ ॥1॥

ದುರಿತ ತಿಮಿರ ಪತಂಗ । ದೇವ ದೇವೋತ್ತುಂಗ ॥
ಪರಮ ನೀತಿ ವಿಚಾರ । ಪೊಗಳುವೆನು ಧೀರ ॥2॥

ಮೂಷಿಕನ ಮೇಲೇರಿ । ಮಿಗೆ ಬರುವೆ ದಯದೋರಿ ॥
ಭೂಸುರರ ಭಕ್ತಿಯನು । ಬಿಡದೆ ಕೈಗೊಂಬವನು ॥3॥

ಏನೆಂದು ಪೊಗಳುವೆನು । ಎನಗಳವೆ ಯಿಂದು ॥
ನಿರುತ ಹರಕೆಯ ತಂದು । ನಿನ್ನ ಮುಂದಕೆ ಬಂದು ॥
ಎರಗಿ ನೈವೇದ್ಯವನು । ಇತ್ತು ಪೋಗುವರನ್ನು ॥4॥

ಕರವಿಡಿದು ರಕ್ಷಿಸುವೆ । ಕಲ್ಯಾಣದಿಂದಿರುವೆ ॥
ಚರಣಕೆರಗುವೆ ನಿತ್ಯ । ಭಾಪು ಗಣನಾಥ ॥5॥

ವಚನ

ಇಂತೆಂದು ಸಿದ್ಧಿವಿನಾಯಕನಂ ಭಜಿಸಿ ಸಾಂಬಶಿವನ ಭಜಿಸುವೆನದೆಂತೆನೆ -

ರಾಗ ಮೆಚ್ಚು ಬಹುಳ ಝಂಪೆತಾಳ

ಜಯ ನಿತ್ಯ ಕಲ್ಯಾಣ । ಜಯತು ಉರಗಾಭರಣ ॥
ಜಯ ಸುರಾರ್ಚಿತ ಚರಣ । ಜಯ ಕಲುಷ ಹರಣ ॥6॥

ಜಯ ದಕ್ಷ ಮದಭಂಗ । ಜಯತು ನಂದಿಯ ತುರಂಗ ॥
ಜಯತು ಕರುಣಾಪಾಂಗ । ಜಯ ಮೋಹನಾಂಗ ॥7॥

ಜಯ ರಜತಗಿರಿವಾಸ । ಜಯ ಚಂದ್ರಮೌಳೀಶ ॥
ಜಯ ಮುನಿ ಮನೋಲ್ಲಾಸ । ಜಯ ಪಾರ್ವತೀಶ ॥ ಜಯತು ಜಯತು ॥8॥

ವಚನ

ಇಂತೆಂದು ಸಾಂಬಶಿವನಂ ಭಜಿಸಿ ಗಿರಿಜಾತೆಯಂ ಭಜಿಸುವೆನದೆಂತೆನೆ -

ರಾಗ ಮಧುಮಾಧವಿ ಏಕತಾಳ

ಅಂಬಾ ಕೈಮುಗಿದಂಬ । ಸ್ತುತಿಯ ಕೈಗೊಂಬ ।
ಕೀರ್ತಿವಿಡಂಬೆಯ ನೆನೆವೆನು ನಾನು । ಲೋಕ ಜನನಿಯಾ ।
ಕರಿಮುಖನ ಮಾತೆ । ಕರುಣಿಪುದೆನ್ನ ವಾಕ್ಯದಿ ನೆಲಸಮ್ಮಾ ॥9॥

ವಚನ

ಇಂತೆಂದು ಗಿರಿಜಾತೆಯಂ ಭಜಿಸಿ ಸರಸ್ವತಿಯಂ ಭಜಿಸುವೆನದೆಂತೆನೆ -

ರಾಗ ಮಾರವಿ

ಕಮಲಜಾತನ ರಾಣಿ । ಕಮಲಸನ್ನಿಭ ವೇಣಿ ॥
ಕಮಲಾಕ್ಷ ಭಕ್ತ ಹ । ತ್ಕಮಲವಾಸಿನಿಯೆ ॥10॥

ಹರಿ ಮಧ್ಯೆ ಹರಿ ವೇಣಿ । ನಿರುತ ವೀಣಾಪಾಣಿ ॥
ವರವ ಕೊಡು ಕಲ್ಯಾಣಿ । ಸ್ಮರಿಸುವೆನು ವಾಣಿ ॥11॥

ವಚನ

ಇಂತೆಂದು ಸಕಲ ದೇವತಾ ಪ್ರಾರ್ಥನೆಯಂ ಮಾಡಿ ಶ್ರೀಮನ್ಮಹಾಭಾರತದೊಳಗಣ ಆದಿಪರ್ವ ಪ್ರಸಂಗವನ್ನು ಯಕ್ಷಗಾನ ಕ್ರಮದಿಂದ ಪೇಳ್ವೆನದೆಂತೆನೆ -

ರಾಗ ದ್ವಿಪದಿ

ಇಂದುಕುಲ ಶಾಂತನುದರಲ್ಲಿ ಪುಟ್ಟಿದನಾ ।
ಕಂದ ಚಿತ್ರಾಂಗದನು ವಿಚಿತ್ರವೀರ್ಯಕನ ॥12॥

ವಧುವಂಬೆಯಂಬಿಕೆಗೆ ಸೂನುವೆಂದೆನಿಪ ॥
ಚದುರ ಧತರಾಷ್ಟ್ರನು ಪಾಂಡವ ಕ್ಷಿತಿಪ ॥13॥

ಧರಣಿಯಂ ಪಾಲಿಸಿದನಾ ದಯಾಸಿಂಧು ।
ಪರಮ ಧರ್ಮಿಷ್ಠನಾ ಪುಣ್ಯ ದಯಸಿಂಧು ॥14॥

ಆ ಜಗಾಧಿಪ ಕುಂತಿಮಾದ್ರಿ ದೇವಿಯನು ।

ರಾಜಲಕ್ಷಣದಿಂದಲಾಗೆ ಮದುವೆಯನು ||15||

ಸಂಭ್ರಮದಿ ಮಾಡಿಕೊಂಡರಲೊಂದು ದಿವಸ |
ಜಂಭಾರಿಯಂತೆ ಒಡ್ಡೋಲಗವನಿತ್ತ ||16||

ವಚನ

ಇಂತು ಪಾಂಡುಭೂಪಾಲನು ಒಡ್ಡೋಲಗಂಗೊಟ್ಟು ಕುಳಿತ ಸಮಯದಲ್ಲಿ ವನಚಾರರು ಬಂದು ಏನೆನುತಿದ್ದರು -

ರಾಗ ಮೆಚ್ಚುಬಹುಳ ಝಂಪೆತಾಳ

ಎಲೆ ಪಾಂಡುಭೂಪಾಲ | ಇಷ್ಟು ದಿನ ಈ ರಾಜ್ಯ ||
ಬೆಲೆಯಿಲ್ಲದಂತಾಯ್ತು | ಬಿನ್ನಪವ ಕೇಳು ||17||

ವನದೊಳಗೆ ಮಗಬಾಧೆ | ವಶವೆಲ್ಲ ಶಿವ ಬಲ್ಲ |
ನಿನಗೊರೆವೆ ಯಿದನೆಲ್ಲ | ಲಾಲಿಪುದು ಸೊಲ್ಲ ||18||

ವಚನ

ಇಂತೆಂದ ವನಚಾರಕರ ನುಡಿಯಂ ಕೇಳಿ ಪಾಂಡುಭೂಪಾಲನು ಬೇಟೆಯಾಡುತ್ತ ಬಂದನದೆಂತೆನೆ-

ರಾಗ ಶಂಕರಾಭರಣ ಅಷ್ಟತಾಳ

ಬೇಂಟೆಯಾಡ ಬಂದನೋ | ಭೂಪಾಲ |
ಬೇಂಟೆಯಾಡ ಬಂದನೋ ||
ಗೋಟ ಮರಾಟ ಕರಾಟ ಹಮ್ಮೀರ |
ಮಾರಾಷ್ಟ್ರ ನಪರು ಹತ್ತುಕೋಟಿ ಸಹಿತ |
ಬೇಂಟೆಯಾಡ ಬಂದನೋ ||19||

ಇತ್ತಿತ್ತ ಬನ್ನಿರಯ್ಯ | ಹಕ್ಕಿಯ ಹುಲ್ಲೆಯ ಮಗಂಗಳ |
ಹತ್ತೆಂಟು ತಂದರೆ | ಮುತ್ತಿನ ಪದಕವನಿತ್ತು ಮನ್ನಿಪೆನೆಂದು |
ಬೇಂಟೆಯಾಡ ಬಂದನು | ಭೂಪಾಲ | ಬೇಂಟೆಯಾಡಬಂದನು ||20||

ಇಂತೆಂದು ಭೂಕಾಂತನಂದು | ವನಾಂತರದಿಂದ |
ಮಗಂಗಳ ಕೊಂದು | ಕೊಂತದಲಿರಿದು ಮಾರಾಂತಕನ ನೆನೆವುತ್ತ |
ನಿಂತ ಸಮಯಕಾಯಿತು ಮುಂದೆ ವಿಚಿತ್ರ || ಬೇಂಟೆಯಾಡ ಬಂದನು ||21||

ವಚನ

ಇಂತು ಬೇಟೆಯಾಡುತ್ತಿರಲು ಒಂದು ವಿಚಿತ್ರವಂ ಕಂಡನದೆಂತೆನೆ -

ರಾಗ ಮಧುಮಾಧವಿ ಏಕತಾಳ

ಅಂದು ಭೂಪೋತ್ತಮ ವನಕೆ ತಾ ಬಂದು |
ಚಂದದಿ ಮಗಬೇಟೆಯಾಡುತಲಂದು ||
ಮುಂದು ಮುಂದಕೆ ಬಂದು ಕಂಡನಾ ನಪನು |
ಕಂದರ್ಪಶರಕೆಚ್ಚೆ ನಿಂತಿರ್ದ ಮಗವ ||22||

ವಚನ

ಇಂತೀ ಋಷಿಗಳರಸನು ಚಂದದಿಂ ತನ್ನರಸಿಯೊಳು ಮಗರೂಪದೊಳು ಕ್ರೀಡಿಸುತ್ತಿರ ಲೊಂದು ಶರವನೆಸೆದಾಗ ಪಾಂಡುಭೂಪನು ಮಗಮಿಥುನಕೆಸೆಯಲಾಕ್ಷಣ ಧಗಧಗಿಸುವ ಕೋಪದಿಂದ ಮುನಿವರರತಿ ಬೇಗದಿಂದ ನಿಜರೂಪವನಾಂತು ಮತ್ತಿಂತೆಂದನು.

ರಾಗ ಶಂಕರಾಭರಣ ಏಕತಾಳ

ಯಾತಕೆನ್ನನು ಕೊಂದೆ ಭೂಪಾಲ | ಜಗನ್ನಾಥನ ಭಜಿಸುತ್ತ |
ಕಯ್ಯ ಮುಗಿದು ತೋಷದೊಳಿರ್ದ | ಯಾತಕೆನ್ನನು ||

ನಿನ್ನ ರಾಜ್ಯವ ಬಯಸಲಿಲ್ಲವೊ ಭೂಪಾಲ |
ನಿನ್ನ ಕನ್ನಿಕೆಯ ಕಳಲಿಲ್ಲವೊ ಭೂಪಾಲ |
ಎನ್ನರಸಿಯೊಳು ಸುರತವನೆಸಗುವಾ |
ಗೆನ್ನನೇತಕೆ ಯೆಸೆದೆ ಭೂಪಾಲ || ಯಾತಕೆ ||23||

ಸತಿಯ ರಮಿಸುತಲಿರೆ ಕೊಂದೆಯಲ್ಲ ।
ಭೂಪತಿಯೆ ನಿನಗೀ ವಿಧಿ ಮುಂದೆಲ್ಲ ।
ಶತಗುಣಂಗಳನು ಮಾಡಿದೆಯಲ್ಲ ।
ಇನ್ನು ಹಿತವಾಗುವದೇನೊ ಮುಂದೆಲ್ಲ ॥ ಯಾತಕೆ ॥24॥

ನಿನ್ನ ಸತಿಯ ಕೂಡಲು ಯಮ ತಾ ಬಂದು ।
ಚೆನ್ನಾಗಿ ಕರಕೊಂಡು ಪೋಗಲಿಯೆನುತ ॥
ತಾನಿಂದು ರೂಪವ ಬಿಟ್ಟು ಸಮ್ಮುಖದಲಿ ।
ಮುನಿ ನೊಂದು ಹೀಗೆಂದು ಪೇಳಿದನಾಗ ॥ ಯಾತಕೆ ॥25॥

ವಚನ

ಇಂತೆಂದು ರಾಯ ಮುನಿ ನುಡಿದ ಮಾತಂ ಕೇಳಿ ಏನೆಂದು ಚಿಂತಿಸುತಿದ್ದನೋ -

ರಾಗ ಮಧುಮಾಧವಿ ತಾಳ ಪಂಚಘಾತ ಮಟ್ಟೆ

ಏಕೆ ಮುನಿವೆ ಮುನಿವರೇಣ್ಯ । ಎನ್ನ ಮೇಲಿಂದು ॥
ಕಾಕು ಬುದ್ಧಿಯಿಂದ ನಾನು । ಕಾಣದೆಸೆದೆನು ॥26॥

ನರಮನುಜನು ಮಗದ ರೂಪನಾಂತುಕೊಂಡು ಕಾನನದೊಳು ॥
ಇರುವುದನ್ನು ಇಲ್ಲಿ ನಾನು ಈಗ ಕಂಡೆನು ॥27॥

ಹುರಿಯ ನೇಣ ಕಯ್ಯಳ್ಪಿಡಿಯೆ ಉರಗನಂತೆ ಕಚ್ಚಿತಲ್ಲ ॥
ಅರಿಯದೆಸೆದೆನೆಂದು ಮುನಿಯ ಚರಣಕ್ಕೆರಗಿದ ॥
ಮುನಿಯ ಚರಣಕ್ಕೆರಗಿದ ॥28॥

ವಚನ

ಇಂತೆಂದು ಕೊಟ್ಟ ಶಾಪ ತಿರುಗದೆಂದು ಮುನಿ ಕೈವಲ್ಯಕ್ಕೈದಲು ಇತ್ತಲಾ ರಾಯ ಚಿಂತಿಸುತ್ತ ಏನೆನುತ್ತಿದ್ದನು -

ರಾಗ ಮಧುಮಾಧವಿ ಏಕತಾಳ

ಇನ್ನು ದೇಶಕೆ ಪೋಗಲಾರೆ । ಈ ವನದೊಳು ।
ಓನ್ನಮ ಶಿವಯೆಂದು ಜಪಿಸುತ್ತಲಿಹೆನು ॥
ಕನ್ನೆಯರನು ಬಿಟ್ಟು ಖಿನ್ನ । ನಾಗುತ ರಾಜ್ಯ ।
ವನ್ನು ಅಗ್ರಜಗಿತ್ತೆ ಯೆಂದು ಪೇಳಿದನು ॥29॥

ವಚನ

ಇಂತೆಂದು ರಾಯನು ಮಮ್ಮನೆ ಮರುಗಿ ರಾಷ್ಟ್ರಾಧಿಕಾರಮಂ ದತರಾಷ್ಟ್ರಂಗೊಪ್ಪಿಸಿ ಕುಂತಿಮಾದ್ರಿಯರಂ ಕೂಡಿ ಬದರಿಕಾಶ್ರಮದಲ್ಲಿ ತಪಸ್ಸಂ ಮಾಡುತ್ತಿರಲಂದು ಅತ್ತಲಾ ಹಸ್ತಿನಾವತಿಯೊಳು ಧತರಾಷ್ಟ್ರನು ಗಾಂಧಾರಿಯ ವಿವಾಹಮಂ ಮಾಡಿಕೊಂಡು । ರಾಜ್ಯಭಾರಮಂ ಧರಿಸಿ ಸುಖದಿಂದಿರಲೊಂದು ದಿವಸ ವೇದವ್ಯಾಸರು ಬರುತಿರ್ದರು । ಕರದೊಳು ರುದ್ರಾಕ್ಷಿ ಶಿರದೊಳ್ ಜಡೆ । ಫಣೆಗೆ ಭಸಿತ ಜಿಹ್ವಾರಂಗದಿಂದ ಪರವಸ್ತುವಿನ ಚರಣ ಸ್ಮರಣೆಗಳಿಂದ ಬಂದ ವ್ಯಾಸಮುನಿಗರ್ಘ್ಯಾಸನೋಪಚಾರಂಗಳಂ ಅನುಕರಿಸುತ್ತಬಲೆ ತನ್ನ ಸಂತತಿಗಿಂತಾನುತಾಪಮೆಲ್ಲಮಂ ಪೇಳೆ ವಿನಯದಿಂ ವ್ಯಾಸ ಮಂತ್ರೋಪದೇಶಮಂ ಕರುಣಿಸೆ ಕಪೆಯಿಂದ ಗಾಂಧಾರಿ ಗರ್ಭಮಂ ತಾಳ್ದಳು । ಇತ್ತಲಾ ಕುಂತಿ ತನ್ನ ಪತಿಯಾದ ಪಾಂಡುವಿನ ಸಮೀಪಕ್ಕಂ ಬಂದು ಏನೆನುತಿದ್ದಳೂ -

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅರಸ ರಾಜ್ಯವ ಬಿಟ್ಟೆ ಹೆಂಡಿರ ।
ಸರಕು ಮಾಡದೆ ತೊಟ್ಟೆ ।
ವರ ತರುವ ತೊಗಲುಟ್ಟೆ ಎನ್ನೊಳು ಸಿಟ್ಟೆ ॥30॥

ಅತ್ತಲಾ ಗಾಂಧಾರಿಗಿಂದು ಮುನಿ ಬಂದು ।
ಉತ್ತಮದ ಮಂತ್ರವನು ಕರುಣಿಸೆ ।
ಮತ್ತೆನಗೆ ದಯಸಿಂಧು ಲಾಲಿಸೆನುತ್ತ ನಿಂದು ॥31॥

ಪೇಳುತಿರಲಾ ಭೂಮಿಪಾಲನು ।
ಕೇಳದಂದದಿ ಸುಮ್ಮನಿರುತಿರೆ ।
ತಾಳಲಾರೆನು ಎನ್ನ ನುಡಿಯನು ಲಾಲಿಸೆನಲು ॥32॥

ವಚನ

ಇಂತೆಂದು ಕುಂತಿ ನುಡಿಯಲು ರಾಯ ಏನೆನುತಿದ್ದನು -

ರಾಗ ದ್ವಿಪದಿ ಝುಂಪೆತಾಳ

ಎಲೆ ಕುಂತಿ ಕೇಳೆನಗೆ ಯತಿವರಿಯನಿಂದು ।
ಮುಳಿದು ಶಾಪವನಿತ್ತ ಮುಗುದೆ ಕಡು ನೊಂದು ॥33॥

ಪತ್ನಿಯರ ಕೂಡಿದರೆ ಫಣಿ ಕಚ್ಚಿದಂಥ ।
ಯತ್ನವಾವುದು ಕೇಃ ಎಂದ ಭೂಕಾಂತ ॥34॥

ಏನ ಮಾಡುವೆನಿನ್ನು ಏ ಮುದ್ದು ನೀರೆ ।
ನೀ ನಿಲ್ಲಬೇಡವೀಗತ್ತತ್ತ ಸಾರೆ ॥35॥

ಮಾತಾಡದಿಹುದೇಕೆ ಮತ್ತೆನ್ನ ಕೂಡೆ ।
ಈ ತರುಣಿ ಹೀಗೆಂದು ಪೇಳಿದಳು ನಪಗೆ ॥36॥

ರಾಗ ಸೌರಾಷ್ಟ್ರ ಅಷ್ಟತಾಳ

ಒಂದು ದಿವಸ ನಮ್ಮಯ್ಯನ ಗಹಕೆ । ದೂರ್ವಾಸ ಮುನಿಯೈತರೆ ।
ಪೂಜಿಸದಿರಲೆನ್ನ ಜನಕ । ಕಂಡು ನಾನು ಚರಣಕ್ಕೆರಗಿದೆನು ॥37॥

ಸರಸಿಜದಿಂದೆನ್ನ ಶಿರವನ್ನು ಪಿಡಿದೆತ್ತಿ ಹರುಷದಿಂದ ।
ಹರಕೆ ಮಂತ್ರೋಪದೇಶವನಿತ್ತು ತೆರಳಲತ್ತಾ ॥38॥

ಘನ ಮಂತ್ರವನು ನಾನು ನೆನೆಯಲಾ ದಿನಪನು ವಿನಯದಿಂದ ಬಂದನು ।
ಕಾಣುತೆನಗೆ ಮಗನನಿತ್ತಾ । ನಾ ಗಂಗಾ ಜನನಿಗಿತ್ತೆ ॥39॥

ಎನ್ನೊಳು ಋಷಿಮಂತ್ರ ಇನ್ನು ನಾಲ್ಕಿದೆಯೀಗ ನಿನ್ನೊಳ್ಪೇಳಿ ।
ಸುರರನ್ನು ನೆನೆದು ಸುತರನ್ನು ಪಡೆಯಲೆ ಸಂಪನ್ನ ವಾರ್ತೆ ॥40॥

ವಚನ

ಇಂತೆಂದ ಸರಸಿಜವದನೆಗೆ ಯನ್ನಯ ಕರಣಕ್ಕೆ ಹರುಷಮಂ ತಂದೆ ಶಶಿಕುಲ ಮುಂದೆ ಮೆರವರ್ತಿಯುಂಟು ನಡೆ ಕುವರರ ಪಡೆ ಯೆಂದೆನಲಾಗ । ಕುಂತಿಯು ನದಿಯೆಡೆಗಂ ಬಂದು ಯಮದೇವರಂ ಚಿಂತಿಸೆ ಅಂತಕಂ ಬಂದು ಸೋಂಕಲು ದಂತಿಪುರದರಸಿ ಗರ್ಭಮಂ ತಾಳ್ದಳು -

ರಾಗ ರಾಮಕ್ರಿಯೆ ಝಂಪೆತಾಳ

ಎಳೆ ರವಿಯಂದದಲಿ ಪೊಳೆಯೆ ಶಿಶು ಗರ್ಭದೊಳು ।
ನಳಿನಾಯತ ನೇತ್ರೆ ಪುಳಕವಾಂತಿಹಳು ॥41॥

ನಡೆ ಮೆಲ್ಲನಾದಪ್ಪು ನುಡಿ ತೊದಳುತಿರೆಗುಟ್ಟು ।
ಬಿಡದೆ ಅರ್ಭಕನನಿಟ್ಟ ಪೊಡಲೋಳಳವಟ್ಟು ॥42॥

ದಂತಿಪುರದ ಕಾಂತೆ ಕುಂತಿಯೆ ಗುಣವಂತೆ ।
ಸಂತಸದಿ ಪೆತ್ತಳಂತೆ ನಿನ್ನಂತೆ ॥43॥

ಎನಲು ಸಖಿಯರು ತಮ್ಮ ಮನದೊಳರಿದುದ ಘಮ್ಮನೆ ।
ನೆನೆದು ಗಾಂಧಾರಿಯಮ್ಮನ ನೆನೆದಳಮ್ಮಾ ॥44॥

ರಾಗ ಕೇತಾರಗೌಳ ಏಕತಾಳ

ಇತ್ತಲೀ ಕುಂತಿಯು ಧರ್ಮಜನುತ್ತಮ ನಕ್ಷತ್ರದಲ್ಲಿ ।
ಪೆತ್ತ ವಾರ್ತೆ ಹಸ್ತಿನಾಪುರದತ್ತ ಪೋಗಲು ॥
ಚಿತ್ತದೊಳು ಕ್ರೋಧವ ತಾಳುತ್ತ ಗಾಂಧಾರಿಯು ಬಸು ।
ರೊತ್ತಿ ಪಿಡಿಯಲು ಕರುಳ್ ಪಥಿವಿಗೆ ಬೀಳೆ ॥45॥

ಆ ಸಮಯದಲ್ಲಿ ವೇದವ್ಯಾಸ ಮುನಿ ಬಂದು ಕಂಡ ।
ನಾ ಸತಿಯ ಗರ್ಜಿಸುತ್ತ ಮಾಂಸವೆಲ್ಲವ ॥
ಮೋಸವೋಗದಂತೆ ಪಿಡಿದೈಸು ಖಂಡಗಳನ್ನು ।
ಹೇಸದೊಂದೊಂದ ನಿಲಿಸಿ ಪೂಜಿಸೆ ॥46॥

ನೂರವಂದನೆಯ ದಿನ ಕುಮಾರನನ್ನೀಕ್ಷಿಸುಯೆಂದು ।
ಮಾರುತವೇಗದಿ ಮುನಿಧೀರನಾಶ್ರಮಕೆ ।
ಸಾರಿ ಪೋಗುತಿರಲಾಪ್ರಕಾರದಿಂದಲಿ ರಾಜಿಸೆ ।
ಕೌರವರ ಜನನ ಗಾಂಧಾರಿಗಾಯಿತು ॥47॥

ವಚನ

ಇಂತೆಂದು ಈ ಪ್ರಕಾರದಲ್ಲಿ ಕೌರವರ ಜನನವಾಗಲಾಗಿ ಇತ್ತಲಾ ಕುಂತಿಯು ಮತ್ತೊಂದು ದಿನ ನದಿಯೆಡೆಗೆ ಬಂದು ಏನಮಾಡುತ್ತಿದ್ದಳು -

ರಾಗ ಕೇತಾರಗೌಳ ಅಷ್ಟತಾಳ

ಮುದದಿಂದ ಮಿಂದು ಮುಡಿಯನುಟ್ಟಳಾಗ ।
ಸದಮಳ ವಾಯುವ ನೆನೆದಳು ॥
ತದನಂತರದಿ ಬಂದು ಮಾರುತ ಮುಟ್ಟಲು ।
ಚದುರೆ ಗರ್ಭವನಾಂತಳು ಕುಂತಿ ॥48॥

ನವಮಾಸ ಪೂರ್ಣಮಾಸದೊಳೊಂದಿ ।
ಪವಮಾನ ರೂಪನ ಪಡೆದಳು ॥
ದಿವಿಜರೆಲ್ಲರು ಬಂದು ನಲಿದಾಡೆ ಕೌ ।
ರವರೆಲ್ಲ ಕೇಳಿ ಯೋಚಿಸುತಿರಲು ॥49॥

ಥಟ್ಟನರೆಗಲ್ಲ ಮೇಲೆ ಭೀಮನು ।
ಪುಟ್ಟಲಿಬ್ಬಗೆಯಾದುದನಂದು ಕುಂತಿ ॥
ನೆಟ್ಟನೆ ನಿಂತುಯೀಕ್ಷಿಸುತಿರಲು ಕಂಡಾಗ ।
ತೊಟ್ಟಿಲೊಳಿಟ್ಟು ತೂಗಿದಳಾಗ ॥50॥

ಕಂದಯ್ಯ ಮಾರುತಿ ಬಾರಯ್ಯ ।
ಮುದದಿಂದೆನ್ನ ಮಾಣಿಕ ನಿಲಯಯ್ಯ ॥
ಚಂದಿರನನು ನೋಡಿ ನಲಿಯಯ್ಯ ।
ಎಂದಾಗ ಮಂದಗಮನೆ ಕುಂತಿ ಪಾಡಿ ತೂಗಿದಳು ॥51॥

ವಚನ

ಇಂತೆಂದು ಜನಿಸಿದ ಕುಮಾರನಂ ಕಂಡು ಹರುಷಿತಳಾಗಿ ಕೆಲವು ದಿನದ ಮೇಲೆ ನದಿಯಡೆಗಂ ಬಂದು ಇಂದ್ರದೇವನಂ ನೆನೆಯಲಾಗಿ ಆತ ಕಾಂಬ ಬಗೆಯದೆಂತೆನೆ -

ರಾಗ ಮಧುಮಾಧವಿ ಏಕತಾಳ

ಬಿಳಿಯಾನೆಯೇರಿ ಬೇಗದಿಂ ಬಂದನಿಂದ್ರ ।
ನಳಿನಾಕ್ಷಿ ಕಂಡು ನಾಚಲು ಮುದದಿಂದ ॥
ಲಲನೆಯ ಪಿಡಿಯಲು ಚಲುವೆ ಗರ್ಭವನಾಂತು ॥
ಒಲವ ನೋಡುತ ಶಕ್ರ ಘಳಿಲನೈದಿದನು ॥52॥

ವರ ಶುಭಲಗ್ನದುತ್ತಮ ತಾರೆಯಲ್ಲಿ ।
ವರ ಕುಮಾರಕನ ಬೆಸನಾದಳು ಕುಂತಿ ॥53॥

ವಚನ

ಇಂದ್ರನ ದೆಸೆಯಿಂದ ಕನ್ನೆಯಲ್ಲಿಂದ್ರಜಂ ಜನಿಸಲ್ಕಿಂದ್ರಾದ್ಯಖಿಳಾನುರಾಗವುಪೇಂದ್ರನ ಮೇಲೆ ಪೂಮಳೆಗರೆದರು ಆಗಲಾ ಕುಂತಿಯು ಮೂವರು ಕುಮಾರಕರಂ ಕಂಡು ಹರುಷಿತಳಾಗಿ ಮಾದ್ರಿಯೊಡನೇನೆನುತಿದ್ದಳೂ -

ಕಂದ

ಎಲೆ ಮಾದ್ರಿ ನಾಲ್ಕು ಪುತ್ರ ।
ಕುಲತಿಲಕರನ್ನು ಪಡೆದು ಇನ್ನೊಂದು ಮಂತ್ರವಾ ಪೇಳ್ವೆ ॥
ನೊಲವಿಂದ ಧರಿಸೆನೆ ।
ಘಲಘಲನೆ ಬಂದಳಕ್ಕನ ಬಳಿಗೆ ॥54॥

ರಾಗ ಮಾರವಿ ಅಷ್ಟತಾಳ

ಅಕ್ಕ ತಂಗಿಯರಿಬ್ಬರಂದು । ನಸು ।
ನಕ್ಕು ದೇವರ್ಕಳಿಗೆರಗುತ್ತ ನಿಂದು ॥
ಅಕ್ಕ ಕುಂತಿಯು ಮಾದ್ರಿದೇವಿಯರನ್ನು ಕರೆದು ।
ತನ್ನ ಸಂತೋಷದಿಂದೊಂದು ಮಂತ್ರವಿತ್ತುದನ್ನು ।
ತಾ ತನ್ನ ಜಿಹ್ವೆಗಂದದನು ಕೊಂಡು ॥
ಚಿಂತಿಸುತಿರ್ಪಳಶ್ವಿನೀ ದೇವರನ್ನು ॥
ಅಕ್ಕ ತಂಗಿಯರವರಿಬ್ಬರಂದು ॥55॥

ವಿನಯದಿ ಮಾದ್ರಿಯನೀಕ್ಷಿಸಲಂದು ॥

ತನಯರು ದ್ವಯರಾಗಲೆಂದು । ಪೇಳಿ ।
ತೆರಳಿದರತ್ತ ಹರುಷವ ತಂದು ॥
ಅಕ್ಕತಂಗಿಯರವರಿಬ್ಬರಂದು ॥56॥

ರಾಮ ಲಕ್ಷ್ಮಣರ ಕಂಡಂತೆ । ಬಲ ।
ರಾಮ ಕೃಷ್ಣರನು ಪೋಲುವರೆಂಬಂತೆ ॥
ಭೂಮಿಯೊಳ್ಪೆತ್ತಳಾ ಕಾಂತೆ । ಜಗದಿ ।
ಭೂಪನಿಗಿನ್ನಾರು ಎಣೆಯಿಲ್ಲವೆಂಬಂತೆ ॥
ಅಕ್ಕತಂಗಿಯರವರಿಬ್ಬರಂದು ॥57॥

ವಚನ

ಇಂತೆಂದು ಜನಿಸಿದ ಕುಮಾರಕರಂ ಕಂಡು ಕುಂತಿ ಮಾದ್ರಿಯರು ಭೂಕಾಂತನೆಡೆಗೆ ಬಂದರದೆಂತೆನೆ-

ರಾಗ ಮಧುಮಾಧವಿ ಏಕತಾಳ

ಕುಂತಿ ಮಾದ್ರಿಯರು । ಕರೆತರಲು ಹರುಷದೊಳು ।
ಸಂತೋಷದಿಂದ ಭೂಕಾಂತನ ಬಳಿಗೆ ॥
ನಿಂತಿಹ ಹದನನು ಸಂತಸದಿ ತಿಳಿದು ।
ಸಂತತಿಗಳ ಯತಿಗಳಿಗೆ ತೋರಿಸಿದ ॥58॥

ವರ ಧರ್ಮಸುತ ಭೀಮನರ್ಜುನ ನಕುಲ ।
ಕಿರಿಯಾತ ಸಹದೇವ ನೋಡು ಭೂಪಾಲ ॥59॥

ಕರುಣದಿ ಧರಣಿ ಸುರರನ್ನು ಕರೆಸಿ ।
ನಾಮಕರಣ ವಿರಚಿಸಿ ಗುರುಮುಖದಿಂದ ॥
ಬರಹವ ಕಲಿಸುತ ಕರಿಪುರದೊರೆಯು ।
ತರುಣಿಯರೇಳ್ಗೆಯ ನೋಡಿ ಕಂಡು ಹಿಗ್ಗಿದನು ॥60॥

ವಚನ

ಇಂತೀ ಇಂದುಕುಲ ತಿಲಕ ಛಲದಂಕ ಧರ್ಮಜ, ಭೀಮ ಫಲುಗುಣ ಯಮಳರಿರುತಿರೆ । ಇಂತೀ ಪಾಂಡುಭೂಪಾಲನ ಸಂತತಿಗಳೆಲ್ಲ ॥ ಹಣ್ಣ ಸಂತೋಷದಿಂದಲೆ ಕೊಯ್ದು ಕುಂತಿಗೀಯಲು ಕಾಂತೆ ನಸುನಗುತ ಭೂಕಾಂತಗೆಕೊಟ್ಟರೆ ಲಕ್ಷ್ಮೀಕಾಂತ ರಕ್ಷಿಸೆನುತ್ತಲನಂತ ಮೋಹದಿಂ ಇಂತಿರುವ ಸಮಯಾಂತರದಲ್ಲಿ ಮನ್ಮಥನೈತರುತಿರ್ದನದೆಂತೆನೆ -

ರಾಗ ಶಂಕರಾಭರಣ ತ್ರಿವುಡೆತಾಳ

ಎಳೆದಳಿರು ಮಾಮರನನೀಕ್ಷಿಸಿ ।
ಪೊಳೆವ ಕೇತಕಿಯೊಲವ ನೋಡುತ ।
ಅಳಿಯ ಬಳಗವ ಕೂಡಿಕೊಂಡೈ । ತಂದ ಮದನ ॥61॥

ಸಂಗಡಕೆ ಮರಿದುಂಬಿ ಮಾರುತ ।
ಮುಂಗಡೆಯ ಫಲವೃಕ್ಷ ನೋಡುತ ।
ತಿಂಗಳಿನ ಮೇಳದಲಿ ಬಂದು । ಪಂಚಶರನು ॥62॥

ಮಂದ ಮಾರುತನೆಂಬ ರಥ ಮುದ ।
ದಿಂದಲೊಪ್ಪುವ ಕಬ್ಬು ವಿಲ್ಲನು ।
ಇಂದಿವರ ಬಾಣವನು ಪಿಡಿದೈ । ತಂದ ಸ್ಮರನು ॥63॥

ಬಂದು ಮನ್ಮಥ ಪಾಂಡು ಭೂಪನ ।
ಅಂದುವೀಕ್ಷಿಸಿ ಶರವನೆಸೆಯಲು ।
ಇಂದುಮುಖಿ ಮಾದ್ರಿಯನು ನೆನದಿಹ । ಸಮಯದಲ್ಲಿ ॥64॥

ರಾಗ ದ್ವಿಪದಿ ಝಂಪೆತಾಳ

ಅಕ್ಕನ ಸಮೀಪದಿಂದಗಲುತ್ತಲಿರಲು ।
ಮಕ್ಕಳಿಗೆ ಮೊಲೆಯೂಡಿ ಪತಿಯೆಡೆಗೆ ಭರದಿ ॥65॥

ಬರಲು ನೂಪುರ ರವಗಳನು ಕೇಳಿ ಖುಷಿಯ ।
ವರ ಸಮೂಹವು ನಡುಗುತಿರೆ ಬಂದಳಾಗ ॥66॥

ಕಂಡನಾ ಭೂಪಾಲ ಕಾಮಿನಿಯವಯವ ।
ಪುಂಡರೀಕದ ಬಾಣ ತಾಗೆ ಭೂಪತಿಯು ॥67॥

ಇವಳು ರಂಭೆಯೊ ಊರ್ವಶಿಯೊ ತಿಲೋತ್ತಮೆಯೊ ।
ವಿವರಿಸುವಡಳವಲ್ಲಯೀಕ್ಷಿಸಲು ಸತಿಯೊ ॥68॥

ಎಂದು ಮನದೊಳು ರಾಯ ಕಳವಳಿಸುವಾಗ ।
ಬಂದು ಮಾದ್ರಿಯ ಸೆರಗ ಪಿಡಿದ ತಾ ಬೇಗ ॥69॥

ವಚನ

ಅತ್ತಲಾ ಮಾದ್ರಿ ಏನೆನುತಿದ್ದಳೂ -

ರಾಗ ಲಹರಿ ಏಕತಾಳ

ಮುಟ್ಟಬೇಡಯ್ಯ ಪಾಂಡು ಭೂಪಾಲ । ಮಹಮುನಿ ।
ಕೊಟ್ಟ ಶಾಪ ತಾ ಪೋಪುದೇನೋ ಭೂಪಾಲ ॥
ಮುಟ್ಟದಂದಿಂದಿಗು ಭೂಪಾಲ । ವಾಲೆಯಿಟ್ಟು ಗುಟ್ಟಿನೊಳಿರ್ದೆ ಭೂಪಾಲ ॥70॥

ಮಂದ ಮಾರುತನಲ್ಲೆ ಎಲೆ ಮಾದ್ರಿ । ಕಣ್ಣ ।
ಮುಂದೆ ಬಂದಿತಲ್ಲೆ ಭಂಗ ಎಲೆ ಮಾದ್ರಿ ॥
ಎಂದಿನ ಹಾಗಲ್ಲ ಕಾಣೆ । ಎಲೆ ಮಾದ್ರಿ । ಇಂದು ।
ಬಂದುದು ಬರಲೆನಗೆ ಎಲೆ ಮಾದ್ರಿ ॥71॥

ಮಕ್ಕಳಿಗಿನ್ನೇನುಗತಿಯೋ ಭೂಪಾಲ । ಎನ್ನ ।
ತಕ್ಕೈಸಲುಳಿವೆಯೇನೋ ಭೂಪಾಲ ॥
ಎಕ್ಕ ಸೊಕ್ಕಿದೇತಕ್ಕಯ್ಯ ಭೂಪಾಲ । ಕು
ಚಕ್ಕೆ ಕಯ್ಯನಿಕ್ಕ ಬೇಡಯ್ಯ ಭೂಪಾಲ ॥72॥

ಇಂಥ ಮಾತುಗಳೇಕೊ ಭೂಪಾಲ । ಅಕ್ಕ ।
ಕುಂತಿ ಸಿಟ್ಟಿ ಮಾಡಳೇನೋ ಭೂಪಾಲ ॥
ಕಂತುವ ನಚ್ಚುವರೇನೊ ಭೂಪಾಲ । ಈ ।
ಚಿಂತೆಯ ಬಿಟ್ಟೆನ್ನ ಬಿಡೊ ಭೂಪಾಲ ॥73॥

ವಚನ

ಇಂತೆಂದು ರಾಯ ಏನೆನುತಿದ್ದನೂ -

ರಾಗ ಭೈರವಿ ತ್ರಿವುಡೆತಾಳ

ಎನ್ನ ಮೇಲಿನಿತೇಕೆ ಕೋಪವು । ಏಣಲೋಚನೆ ಕೇಳೆಲೆ ।
ನಿನ್ನ ಕಾಣದೆ ನಾನು ಚಿಂತಿಪೆ । ನಿತ್ಯ ಬಳಲಿದೆ ಭಾಮಿನಿ ॥
ವನಕೆ ಬಹ ಸಮಯದಲಿ ನಿನ್ನನು । ಒಡನೆ ಬರಬೇಡೆಂದೆನೆ ।
ಬಂದ ಮನ್ಮಥ ಬಂದ ನೋಡೆ ॥74॥

ವನಿತೆ ಕುಂತಿಯ ಮೇಲಣಾಶೆಗಳಿಂದ ನಿನ್ನನು ಬೈದೆನೆ ।
ಮನುಮಥನ ಶರದಿಂದ ಬಂದರೆ ಮುಗುದೆ ನೀ ಪೋಗೆಂದೆನೆ ।
ಇನಿತು ಮುನಿಯುವದೇನು ಭಾಮಿನಿ । ಇನ್ನು ಸೈರಿಸಲಾರೆನೆ ।
ಬಂದ ಮನ್ಮಥ ಬಂದ ನೋಡೆ ॥75॥

ವಚನ

ಇಂತೆಂದ ಭೂಕಾಂತನೊಡನೆ ಮಾದ್ರಿ ಏನೆನುತಿದ್ದಳು -

ರಾಗ ಭೈರವಿ ಅಷ್ಟತಾಳ

ಸರಸ ಸಾಕಯ್ಯ ಧೀರ । ಮುಗಿವೆ ನಾ ಕಯ್ಯ ॥
ಮಾರಶರಕೆ ನೀ ಮಯ್ಯ । ಮಾರಬೇಡವೊ ದಮ್ಮಯ್ಯ ॥76॥

ಅಕ್ಕನೊಡನೆ ಪೇಳಲಿಲ್ಲ । ಎನ್ನ ಮಕ್ಕಳ ಕೂಡಾಡಲಿಲ್ಲ ।
ತಕ್ಕಿಸಬೇಡ ಮತವಲ್ಲ । ಮುಕ್ಕಣ್ಣ ಶಿವನೆ ಬಲ್ಲ ॥77॥

ಎಲ್ಲ ಬುದ್ಧಿಯ ನೀಬಲ್ಲೆ । ಏನೆಲೊ ನಿನ್ನೆದೆ ಕಲ್ಲೆ ।
ತಲ್ಲಣವೇಕೆನ್ನ ಸೊಲ್ಲ । ಎಳ್ಳಷ್ಟಾದರು ಕೇಳಲೊಲ್ಲೆ ॥78॥

ವಚನ

ಇಂತೆಂದು ಮಾದ್ರಿಯೆನಲಾಗಿ ರಾಯ ಏನೆನುತಿದ್ದನು -

ರಾಗ ಶಂಕರಾಭರಣ ಅಷ್ಟತಾಳ

ಕೇಳುವೆ ಮಾದ್ರಿ ನಿನ್ನ ಮಾತನಿಂದು । ತಾಳಲಾರೆ ॥
ನಾಳೆ ಬಂದುದನನುಭವಿಸಿಕೊಂಬೆನು ನಾನು । ತಾಳಲಾರೆ ॥ಪಲ್ಲವಿ॥

ಜನಿಸಿದಾರಭ್ಯದಿಂಥ ತಾಪಗಳಿಲ್ಲ । ತಾಳಲಾರೆ ॥
ಮನುಮಥನೆನ್ನ ಮೇಲೆಸೆದ ಶರಗಳನ್ನು ತಾಳಲಾರೆ ॥
ವನಜಭವನ ಲಿಖಿತ ತಪ್ಪಿಸುವರಾರೆ । ತಾಳಲಾರೆ ॥
ಮುನಿ ಶಾಪವು ಏನಮಾಡಬಲ್ಲದು ನೀರೆ । ತಾಳಲಾರೆ ॥79॥

ಹುಟ್ಟಿದ ಮನುಜರು ಸ್ಥಿರಜೀವಿಯಹರೇನೆ । ತಾಳಲಾರೆ ॥
ನೆಟ್ಟನೆನ್ನೀಕ್ಷಿಸು ನೆರೆಯೆ ಮೋಹವ ಮಾಡು । ತಾಳಲಾರೆ ॥
ಬಟ್ಟ ಕುಚದ ನೀರೆ ಭಾವ ಮೊಗವ ತೋರೆ । ತಾಳಲಾರೆ ॥
ಪಟ್ಟೆ ಶಾಲೆಯನುಟ್ಟ ಚಂದವ ಕಂಡು । ತಾಳಲಾರೆ ॥80॥

ವಚನ

ಈ ರೀತಿಯಿಂದ ಭೂಪಾಲ ಪೇಳಲಾಗಿ ಮಾದ್ರಿ ಏನೆನುತಿದ್ದಳು -

ರಾಗ ಕಾಂಭೋಜಿ ಝಂಪೆತಾಳ

ಇನಿತೇಕೆ ಮರುಳಾದೆ ಏ ಪಾಂಡು ಭೂಪಾಲ ।
ಘನ ಕುಚವ ನೀ ಮುಟ್ಟಬೇಡ ಪಾಂಡು ಭೂಪಾಲ ॥
ಮನುಮಥನಲಗೆ ಮುನ್ನ । ಮೋಹವನ್ನಂತರಿಸಿ
ಇನಿಯನೀ ಮಾತಕೇಳು ತಾಳು ॥81॥

ಶತಮಖವ ಮಾಡಿ ಭೂಲೋಕದೊಳು ಶ್ರೀಹರಿಯ
ನತಿ ಭಕುತಿಯಿಂದ ಭಜಿಸಿ ।
ವ್ರತ ನಿಯಮ ಸ್ನಾನ ಹೋಮಗಳಿಂದ ನಿತ್ಯ ಬಂದ
ತಿಥಿಗಳ ಪೂಜೆ ರಚಿಸಿ ॥
ಯತಿಗಳೊಡನೈದಿ ಆ ಸುರ ಪಟ್ಟವನು ತಾಳ್ದು ಸುರ ।
ಸತಿಯರೆಲ್ಲರ ಭೋಗಿಸಿ । ಸಾಲ
ದತುಳ ಗೌತಮನರಸಿಯನು ನೆರೆದ ದೇವೇಂದ್ರ ।
ವ್ರತಗೆಟ್ಟನೆಂದು ಕಂಡು ಪಾಂಡು ॥82॥

ವಚನ

ಇಂತೆಂದು ಮಾದ್ರಿಯೆನಲಾಗಿ ರಾಯ ಏನೆನುತಿದ್ದನು -

ರಾಗ ದ್ವಿಪದಿ ಝಂಪೆತಾಳ

ಯಾಕೆ ನೀ ಬರಿ ಮಾತನೆಂಬೆ ಏಣಾಕ್ಷಿ ।
ನಾ ಕಯ್ಯ ಬಿಡಲಾರೆ ನರಹರಿಯೆ ಸಾಕ್ಷಿ ॥83॥

ಮಾದ್ರ ದೇಶಾಧಿಪನ ಮಗಳೆ ಮತ್ತೇನೆ ।
ಮಾದ್ರಿ ಬಾ ಮನುಮಥನ ಮದನ ಮದ್ದಾನೆ ॥84॥

ಯಾತ ಕುಚಗಳ ಮೇಲೆ ಎಳೆಯ ಚಂದಿರನ ।
ನೀತಿಯಂ ನಿಲಿಸಿದನೊ ಗಳಿಗೆಯಲಿ ಸ್ಮರನ ॥85॥

ಶರತಾಗೆ ಪಾಂಡುವಿನ ಸ್ತ್ರೀ ಬಲಾತ್ಕರದಿ ।
ನೆರೆವ ಸಮಯಾಂತರದಿ ಕೆಡೆ ನಡೆದು ಭರದಿ ॥86॥

ದೂರದಲಿ ನಿಂತಿರುವ ಸತಿಯಳನು ಕಂಡು ।
ಮಾರನಂಬಿನ ಗಾಯದಿಂದ ಮನನೊಂದು ॥87॥

ವಚನ

ಇಂತೆಂದು ರಾಯನು ವಿರಹವೇದನೆಯಿಂದಲೋರ್ವ ಸಖಿಯಂ ಕರೆದು ಏನೆನುತಿದ್ದನು -

ರಾಗ ನೀಲಾಂಬರಿ ಏಕತಾಳ

ಸರಸಿಜನೇತ್ರೆ ಬಾರೆ । ನಾ ತಾಳಲಾರೆ ।
ಸ್ಮರಬಾಧೆ ಘನವಾಗಿದೆ ॥
ಕಿರಿಯ ಸ್ತ್ರೀ ಮಾದ್ರಿ ಬಂದು । ಎನ್ನಿದಿರೆ ನಿಂದು ।
ಕುರುಳ ನೇವರಿಸುತಂದು ॥
ಗುರುಕುಚಗಳನೆ ತೋರಿ । ಮರೆಗೆಮಾಡಿ ।
ತಿರುಗಿದಳೇತಕೆ ನಾರಿ ॥88॥

ಮುನಿಶಾಪ ಬಂದಿತೆನುತ । ಮಾನಿನಿಯನ್ನೊ ।
ಳ್ಮನಿದು ಮುಟ್ಟಿದಿರೆನ್ನುತ ।
ಘನತಾಪವನು ಬೀರುತ । ಗಳಿಗೆ ಸುಖ ।
ಕನಸಿನ ತೆರನೆನುತ ॥89॥

ತಷೆಯಡರಿದ ನರನು । ಡರ ನೀರನು ।
ಸಸಿನೆ ಸೇವಿಪ ತೆರನು ॥
ಶಶಿಮುಖಿಯರ ನೆನೆದು । ಮನುಜ ಮತ್ತೆ ।
ವಶತಪ್ಪಿ ಮರುಳಾಹನು ॥90॥

ಇಂತಾ ನೀತಿಯನು ಪೇಳಿ ।
ಕಾಂತೆ ಜಾರಿದಳೆ ಸಾರಿ ।
ನಿಂತಿರಬೇಡ ಪೋಗೆ । ಸೈರಿಪೆ ಹೇಗೆ ।
ಕಾಂತಳೆ ಅರಗಳಿಗೆ ॥91॥

ವಚನ

ಇಂತೆಂದು ರಾಯ ಪೇಳಲಾಗಿಸಖಿಯು ಮಾದ್ರಿಯೊಡನೆ ಏನೆನುತ್ತಿದ್ದಳು

ರಾಗ ಕಾಂಭೋಜಿ ಝಂಪೆತಾಳ

ಯಾಕೆ ಮುನಿಸಿನೊಳು ಬಂದೆ । ಏಣಾಕ್ಷಿ ।
ಸಾಕು ನಡೆನಡೆ ಎನ್ನ ಮುಂದೆ ॥
ನೀ ಕುಹಕಗಳನೆಲ್ಲ । ನೆರೆ ಪೇಳ್ದುದಕೆ ನಲ್ಲ ।
ಕಾಕುಮಾತಂದ ನಲ್ಲೆ ॥92॥

ವಸವಂತ ವನಕೆ ಬಂದ । ಸಮಯದೊಳು ।
ಪೂಸ ಯವ್ವನೆಯನು ಕಂಡ ॥
ವಸುಮತೀಶನು ನಿನ್ನ । ಶಶಿಮುಖದ ಮೇಲೆ ಮನ ।
ದೆಸೆಯ ಸರಿಸನು ಕಾಣೆ ಜಾಣೆ ॥93॥

ಹೇಳುವರು ಮರುಳಾದರೆ ।
ಕೇಳುವರು ಹುಚ್ಚಾದರೇನೆ ॥
ಕಾಳು ಮುನಿಪರೆ ತನ್ನ । ಮೇಲೆ ಶರ ಬೀಳೆ ರೋ ।
ಷಾಳಿಯಿಂ ಶಾಪವಿತ್ತುದನು ಮರೆತ ॥94॥

ಅರಸನಿದನರಿದಾದನೇನೆ । ಮುನಿಶಾಪ ।
ಪರಿಹರಿಸದಿರದು ಕಾಣೆ ॥
ಸ್ಮರಕಲೆಯ ತಿಳಿದ ಪ್ರವೀಣ । ಕಡುಜಾಣನೊಳು ।
ಸರಸ ಮೋಹವ ಮಾಡೆ ಕೂಡೆ ॥95॥

ರಾಗ ದ್ವಿಪದಿ ಝಂಪೆತಾಳ

ನೀ ಎನ್ನ ಕಾಡದೆ ನಡೆ ಸಖಿಯೆ ಯೀಗ ।
ಮಾಯಂಗಳನುಪೇಳಿ ಮೋಸದಿಂ ಬೇಗ ॥96॥

ನಲ್ಲನಿಗು ನಿನಗು ನಾ ನೆರೆ ಸಖಿತ್ವವನು ।
ನಲ್ಲಳೆ ಮಾಳ್ಪನೆಂದುರೆ ಬಂದೆ ನಾನು ॥97॥

ಬಂದರೇನಾಯಿತೆ ನಾನು ಬಹಳಲ್ಲ ।
ನಿಂದಿರಲು ಬೇಡ ಪೋಗೀ ಮಾತನೆಲ್ಲ ॥98॥

ಎನಲು ಸಖಿಯಿಂತೆನುತಲುಸುರಿದಳು ನಗುತ ।
ನಲ್ಲ ಜೀವಿಸಲಾರ ಬಾರವ್ವ ಎನುತ ॥99॥

ಎಂದು ಪೇಳಲು ಮಾದ್ರಿ ಮನವೊಡಂಬಟ್ಟು ।
ಬಂದು ಪ್ರಾಣೇಶನಿಗೆ ಎರಗಿ ನಿಂದಿರಲು ॥100॥

ರಾಗ ಕಾಂಭೋಜಿ ಏಕತಾಳ

ನೀರೆ ಬಾರೆ ಮುದ್ದು ಮೊಗವ ತೋರೆ । ಈಗ ।
ಮಾರನುರುಬೆ ತಾಳಲಾರೆ ನೀರೆ ॥
ಇತ್ತಬಾರೆ ಒಂದು ಮುತ್ತ ತಾರೆ । ನಿನ್ನ ।
ವತ್ತ ಕುಚವನೆನ್ನದೆಯೊಳೊತ್ತಿಯಾರೆ ॥
ಚಿತ್ತಜ ಕಲೆಯ ಬಲ್ಲಮತ್ತಯಾನೆ । ನೀನು ।
ಮಾತಿಗುತ್ತರವಿಲ್ಲದೇತಕೆ ನಿತ್ತೆ ಜಾಣೆ ॥101॥

ಮಾತ ಬಲ್ಲೆ ಮಯ್ಯ ಮುಟ್ಟ ಬೇಡ ಕಾಣೊ । ಇದು ।
ನೀತವೆ ಮುನಿಶಾಪ ಬಾರದೇನೊ ॥
ಕಾತುರಗೊಂಬರೆ ಕರವ ಮುಗಿವೆನಯ್ಯ । ನಿನ್ನ ।
ನೇತಕೆ ನಾ ನೋಡ ಬಂದೆ ದಮ್ಮಯ್ಯ ॥102॥

ಚಂದಿರನುದಯಿಸುತ ಬಂದನಲ್ಲೆ । ಕಣ್ಣ ।
ಮುಂದೆ ಬಂದು ಮರುತನಿಂದನಲೆ ॥
ಎಂದಿನ ಹಾಗಲ್ಲ ಕಾಣೆ ಯಿಂದು ನಲ್ಲೆ । ಕಾಮ ।
ಚಂದದಿಂದ ಬಾಣವೆಸದು ಕೊಂದನಲ್ಲೆ ॥103॥

ಕೋಟಿ ಜನ್ಮಾಂತರದೊಳ ಬಂದೆ ನಾನು । ಈ ।
ಪಾಟಿ ದುಃಖಗಳನುಣಲಿಲ್ಲವೇನು ।
ಮಾಟವೆಂಬುದು ಬಂದೆನ್ನ ಕಾಡಿ ಬಿಡನು । ಮದನ ।
ಚಾಟಕವಿದೆಲ್ಲ ಯಿತ್ತ ಬಾರೆ ನೀರೆ ॥104॥

ವಚನ

ಇಂತೆಂದ ರಾಯನೊಡನೆ ಮಾದ್ರಿ ಏನೆನುತ್ತಿದ್ದಳು -

ರಾಗ ದ್ವಿಪದಿ ಝಂಪೆತಾಳ

ಎನ್ನ ನೀ ಮುಟ್ಟಿದರೆ ಯೀಗ ಸ್ವರ್ಗ ।
ವನ್ನು ಕಾಂಬಿರಿ ಮುನಿಯ ಶಾಪದಿಂ ಬೇಗ ॥105॥

ಇನ್ನು ಬಿಡು ಬಿಡು ಸೆರಗ ಸಾರಿದೆನು ನಾನು ।
ನಿನ್ನಾಣೆ ನಡೆ ನಡೆ ನಾಟಕವಿದೇನು ॥106॥

ಎಂದೆನಲು ಸತಿಯ ಮುಂದಲೆಯನ್ನು ಪಿಡಿದು ।
ಅಂದು ಚೌರಾಸೀತಿ ಬಂಧದಲಿ ಬಿಗಿದು ॥107॥

ನೆರೆದು ಮೈಮರೆದನಾ ನರನಾಥನಾಗ ।
ಒರಗಿದನು ಹಾಯೆಂದು ಪಾಂಡು ನಿಮಿಷದೊಳು ॥108॥

ನಾರಾಯಣಾಚ್ಯುತಾ ಮುಕುಂದ ಎನುತಾಗ ।
ಧಾರುಣಿಯಮೇಲೊರಗಿ ಮಲಗಿದನು ಬೇಗ ॥109॥

ಧರಣಿಪಾಲಕ ಪಾಂಡು ಸ್ವರ್ಗವೈದಿದನು ।
ದೊರೆರಾಯ ಮಲಗಿದ್ದೈ ಧೀರ ಯೀ ವನದಿ ॥110॥

ಎನುತ ಮಾದ್ರಾದೇವಿ ಎನ್ನ ಪ್ರಾಣೇಶ ।
ವನದ ಪಾಲಾದ್ಯಲ್ಲ ವಶನು ಭೂಮೀಶ ॥111॥

ಮಾತಾಡದಿಹುದೇಕೆ ಮತ್ತೆನ್ನ ಕೂಡೆ ।
ಯಾತಕ್ಕೆ ಸುಮ್ಮನಿಹೆ ಯೆನುತಲಾ ಪ್ರೌಢೆ ॥112॥

ದೂರದಿಂದೊದರುತಿರೆ ಧರ್ಮಜನು ಬಂದು ।
ವರ ಭೀಮ ಸುರಪ ಸುತ ನಕುಲ ರ್ೈ ತಂದು ॥113॥

ಕಿರಿಯವರು ತಾಯಿರವ ಕಂಡು ಕರೆತರಲು ॥
ಹರನ ಸ್ಮರಿಸುತ ಹಾ ಹಾ ಯೆನುತ ಬರಲು ॥114॥

ವಚನ

ಇಂತೆಂದು ಕುಂತಿ ಮಾದ್ರಿಯರು ಬಹುವಿಧದಿಂ ಪ್ರಳಾಪಿಸುತ್ತಿರಲು ಕುಮಾರರು ಏನೆನುತ್ತಿದ್ದರು-

ರಾಗ ದ್ವಿಪದಿ ಝಂಪೆತಾಳ

ಅಪ್ಪಯ್ಯ ನಿನಗೀಗ ಮುಪ್ಪು ಬಂತಲ್ಲ ।
ಅಪ್ಪಿ ಕೊಂಬರೆ ಯದ್ದು ಬರಲಿಲ್ಲವಲ್ಲ ॥115॥

ನಿನ್ನ ಮುಂದಕೆ ನಾ ವೈವರು ಬಂದು ।
ಚೆಣ್ಣತನದಿ ಹಿಂದಣಂತೆ ನಲಿವುತಲಿ ॥116॥

ಬರಲು ಸಂತೋಷ ಮುದ್ದು ಮಾಡುವೆಯಾ ।
ಹರ ಹರ ಈ ವನದಿ ಮಲಗಿದ್ದೈ ರಾಯ ॥117॥

ರಾಗ ಪಂತುವರಾಳಿ ಝಂಪೆತಾಳ

ಅರಸರಿಲ್ಲದ ರಾಜ್ಯ ಪುರುಷರಿಲ್ಲದ ನಾರಿ ।
ಹಿರಿಯರಿಲ್ಲದ ಮನೆಯು ಇರವಾಯಿತೆಮಗೆ ॥118॥

ಮಕ್ಕಳಿಲ್ಲದ ಭಾಗ್ಯ ಮಡದಿಯಿಲ್ಲದ ಭೋಗ ।
ರೊಕ್ಕವಿಲ್ಲದ ನರನು । ರಂಜಿಸುವ ತೆರನು ॥119॥

ನಮಗೆ ಪಾಂಡು ನಪಾಲ ನಮಿಪೆವಾರನು ಕಂಡು ।
ಕಮಲನಾಭನೆ ಗತಿಯು ಯೆಂದರಾ ಸುತರು ॥120॥

ವಚನ

ಇಂತೀ ಪ್ರಕಾರದಲ್ಲಿ ಆ ಕುಮಾರಕರು ಪ್ರಳಾಪಿಸುತ್ತಿರಲು ಮಾದ್ರಿ ಏನೆನುತಿದ್ದಳು -

ರಾಗ ಗೌಳ ಪಂತು ಏಕತಾಳ

ಅರಸ ಬಂದನು ಎನ್ನ । ಸೆರಗ ಪಿಡಿದನು ಮುನ್ನ ।
ತರವಲ್ಲ ವೆಂದೆ ನಾನು । ಎಷ್ಟು ಹೇಳಿದೆನು ॥121॥

ಕೆಡುವ ಕಾಲಕೆ ಬುದ್ಧಿ ಗೂಡುವದೆ ಪೂರ್ವದಿ ।
ಪಡೆತಂದ ವಿಧಿ ಬೆನ್ನ । ಬಿಡುವುದೇನಕ್ಕ ॥122॥

ಇನ್ನು ಜೀವಸಲಾರೆ ಎನ್ನ ಕುಮಾರಕರ ।
ನಿನ್ನ ಕೈಯೊಳಗಿತ್ತೆ ಮನ್ನಿಸೆ ಸಲಹೆ ॥123॥

ಯನುತಲಾ ಮಾದ್ರಿ । ತನ್ನಿನಿಯನಕೂಡೆ ।
ಅಗ್ನಿಯೊಳು ತೆರಳ್ದಳು ಮಾದ್ರಿ ॥124॥

ವಚನ

ಇಂತೆಂದು ಆ ಕುಮಾರಕರು ಏನೆಂದು ಪ್ರಳಾಪಿಸುತ್ತಿದ್ದರು -

ರಾಗ ಸೌರಾಷ್ಟ್ರ ಏಕತಾಳ

ತರಳ ಪ್ರಾಯದಿ ನಮ್ಮ ತಂದೆಯನೊಯ್ದುದು ।
ಥರವೆನೋ ನಿಮಗೆ ಯಮರಾಜ ॥
ದುರುಳ ಬುದ್ಧಿಯಿದೇಕೊ ಧರ್ಮಜನಾದರು ।
ನೆರೆ ನೋಡಲಾಗದೆ ನಿನಗೆ ॥125॥

ದೇವೇಂದ್ರ ನಿನ್ನಯ ಕಂದ ಮರುಗುವನೆಂದು ।
ತಾಪಗಳಿಲ್ಲವೆ ನಿಮಗೆ ॥
ಭೂವಳಯದಿ ಪಾಂಡು ಭೂಪಾಲನೊವಾಗ ।
ನೀವಿರಲಿಲ್ಲವೆ ಮರುತ ॥126॥

ನಮ್ಮ ತಂದೆಗಳಾದ ಅಶ್ವಿನಿ ದೇವರೆ ।
ನಿಮ್ಮ ಮನಕೆ ಸರಿ ಬಂತೆ ॥

ಎಮಗೀ ವಿಧಿಮಾಡಿ ನಿಮ್ಮ ನಗರಕೊದು ।
ಎಮ್ಮನುದ್ಧರಿಸೆಂದ ನಕುಲ ॥127॥

ಯುಗನಾಲ್ಕು ಕೂಡಿ ಸಾವಿರಬಾರಿ ಮಗುಚಲು ।
ಹಗಲೊಂದೆನಿಸಿದಾ ವಿಧಿಗೆ ॥
ಈಗ ಬುದ್ಧಿ ಪೇಳುವ ಪ್ರೌಢ ನಾಯಕನಾರು ।
ಸೊಗಸು ಮಾಡಿದ ನಮ್ಮ ಪಿತಗೆ ॥128॥

ಅಯ್ಯಯ್ಯ ಬೊಮ್ಮನ ಬಯ್ಯಲೇತಕೆ ನ ।
ಮ್ಮಯ್ಯನ ಕಾಂಬ ಪುಣ್ಯಗಳು ।
ಸುಯ್ಯವಾಗಿ ಹೋ ತು ಹುಯ್ಯಲಾಯಿತು ಹಿರಿ ।
ಯಯ್ಯಗೆ ಪೇಳುವರಿಲ್ಲ ॥129॥

ವಚನ

ಇಂತೆಂದು ಕುಮಾರಕರು ಪ್ರಳಾಪಿಸುತ್ತಿರಲಾ ಕುಂತಿ ಏನೆನುತ್ತಿದ್ದಳು.

ರಾಗ ಸೌರಾಷ್ಟ್ರ ತ್ರಿವುಡೆತಾಳ

ಮರುಗುವಿರೆ ಶಿಶುಗಳಿರ ಧರಣಿಪ । ಸುರರ ಪಟ್ಟಣಕೈದಿದನು ತಾ ।
ಸಿರವರನೆ ಗತಿ ನಿಮಗೆ ಬನ್ನಿರೊ । ದೊರೆಯಬಿಟ್ಟು ॥130॥

ಪೂರ್ವಜನ್ಮದಿ ಪರರ ಜನಕಗೆ । ಸರ್ವಥಾ ನೀವೆರಡ ಬಗೆದಿರಿ ।
ಓರ್ವರಾದರು ಪುಣ್ಯವಂತರು । ಪುಟ್ಟಲಿಲ್ಲ ॥131॥

ವಚನ

ಇಂತೆಂದು ಆ ವನದೊಳಗಿದ್ದ ಋಷಿಗಳೆಲ್ಲ ಬಹ ಬಗೆಯದೆಂತೆನೆ – ವ್ಯಾಸ ಮುನಿದಾಸ ದೂರ್ವಾಸ ಗೌತಮ ಗಾರ್ಗ್ಯರೆಲ್ಲ ಆ ಮುನಿಗಳು ಪಾಂಡುವಿನ ಸಂಸ್ಕಾರಮಂ ಮಾಡಿಸಿ ಈ ಕುಮಾರರ್ಗೆ ಏನೆನುತಿರ್ದರು -

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕಂದಗಳಿರ ಕೇಳಿರಯ್ಯ । ತಂದೆಯನು ಚಿಂತಿಸಲು ಬೇಡ ಮು ।
ಕುಂದನಾಧೀನ ಸಕಲ ಪ್ರಾಣಿಗಳೆಲ್ಲ ಜಗದಿ ॥132॥

ಇಂದು ಹಸ್ತಿನಪುರಕೆ ಪೋಗುವ । ಅಂಧ ಭೂಪತಿಗೆರಗಿಸುವ ನಾವೆಂದು ।
ನಂಬುಗೆಗೊಟ್ಟು ಕರತಂದರು ಕುಮಾರಕರ ॥133॥

ಬರುತ ಧತರಾಷ್ಟ್ರನ ಪದಾಬ್ಜದೊ । ಳೆರಗಿದನು ಧರ್ಮಜನು ಮಾರುತಿ ।
ಸುರಪಸುತ ನಕುಲಾದಿಗಳು ವಂದಿಸಿದರಾಗ ॥134॥

ವಂದಿಸಿದ ಪಾಂಡವರ ತಕ್ಕಿಸು । ತಂದು ಕಣ್ಣೀರಿಂದ ಹೊರಳಿದ ।
ಇಂದು ದೇಸಿಗರಾದಿರೆ ಪಾಂಡುವಿನ ಸುತರೇ ॥135॥

ವಚನ

ಇಂತೆಂದು ಕುಮಾರಕರ ಸಂತೈಸಿ ಕೆಲವು ದಿನದ ಮೇಲೆ ತನ್ನ ಕುಮಾರಕರು ಪಾಂಡವರು ಸಹ ಕೃಪಾಚಾರ್ಯರಲ್ಲಿ ವಿದ್ಯಾಭ್ಯಾಸಕ್ಕೆ ನಿಲಿಸಲು ಭೀಮ ಮಾಡುವ ಚರಿತ್ರವದೆಂತೆನೆ -

ರಾಗ ಶಂಕರಾಭರಣ ಪಂಚಘಾತ ಮಟ್ಟೆತಾಳ

ಬರದು ಬರುವ ಮಾರ್ಗದೊಳಗೆ । ಮರುತ ತನುಜನೆಲ್ಲರನ್ನು ।
ಕರೆದು ಚಿನಿಕೋಲನಾಡಿರೆಂದು । ನಂಬಿಸಿ ಕರೆದನು ॥136॥

ಜೇನನೊಣವ ಕೊಲುವ ತೆರದಿ । ಕೌರವರನ್ನು ಬಡಿವ ।
ಮರುಳನೆಂದು ನಪಗೆ । ದೂರುತಿರಲು ಕೇಳುವ ॥137॥

ಒಂದು ದಿನ ಮಾರರೆಲ್ಲ ಒಂದುಗೂಡಿ ಬರುವುದನ್ನು ।
ಅಂದು ಕಂಡು ಭೀಮಗತ್ತಿನೊಳಗೆ ನೂರ್ವರ ॥138॥

ಸಂದು ಕಾಲಮುರಿದು ಸಣ್ಣ ಬಂಡಿ ಕೋಲೊಳಿಟ್ಟು ದೂಡೆ ।
ಕಂಡು ಪೇಳಲಂದು ಭೂಪನೆಡೆಗೆ ಬಂದರು ॥139॥

ವಚನ

ಆಗಲಾ ಧತರಾಷ್ಟ್ರನು ಭೀಮನೊಡನೆ ಏನೆನುತ್ತಿದ್ದನು -

ದ್ವಿಪದಿ

ಏ ಭೀಮ ಕೇಳಯ್ಯ । ಈ ಕುಮಾರಕರ ।
ನೀ ಬಲಾತ್ಕಾರದಲಿ ನೋಯಿಸಿದೆ ಧೀರ ॥140॥

ನೀನೊಬ್ಬ ಬೇರಾಡು ಇವರು ಬೇರಿರಲಿ ।
ಈ ನೋವ ನಾನು ದಿನ ದಿನಕೆ ಕೇಳಿದೆನು ॥141॥

ಎಂದು ಹಿರಿಯರ ಮಾತ ಕೇಳಿ ನೀವೆಲ್ಲ ।
ಅಂದೊಡಂಬಟ್ಟು ಆ ಗುರುವಿನೊಳು ಪೇಳಿ ॥142॥

ವಚನ

ಆ ಮರುದಿವಸ ಪ್ರಾತಃಕಾಲದಲ್ಲಿ ಮತ್ತಾ ಕುಮಾರಕರ ಕರೆದು ಏನೆನುತ್ತಿದ್ದನು -

ರಾಗ ದೇಶಿ ಅಷ್ಟತಾಳ

ಮಕ್ಕಳೆಲ್ಲ ಬನ್ನಿರೋ ಎಂದಕ್ಕರಿಂದ ವಕ್ಷವೇರಿ ।
ತಕ್ಕು ದಿಕ್ಕು ತದಿಗಿಣ ತೋಂ ।
ಎಂದುಕ್ಕುವ ಹರುಷದಿ ಮರನನಲುಗಿಸುವ ॥ ಓಡಿ ಹೋಗುವ ॥143॥

ತಿರುಗಿ ಆಡಿ ಬರುವ ಮತ್ತೆ । ಕೂಡೆಯಾಡುವ ಬೇಗನೀಡಿ ।
ಕರವನಾಗ ನೀಡಿ ನಂಬುಗೆಯನ್ನು । ಓಡಿ ತಪ್ಪಿಸಿಕೊಂಡು ॥
ಓಡಿ ಹೋಗುವನಾಗ ಗಾಡಿಕಾರ ಭೀಮನು ॥144॥

ಎರಡು ಕರದಿ ನೂರುಕುವರರ ಸೆರಗ ಪಿಡಿದು ।
ಮರದಿಂದ ನೆಲಕ್ಕೆ ಕೆಡಹುತಲಿರಲು ದೂರು ।
ಧರಣೀಶಗೆ ಬಂದುದನಿತರೊಳಗೆ ॥
ಓಡಿ ಹೋಗುವ । ಗಾಡಿ ಭೀಮನು ॥145॥

ಇಂತು ಮಕ್ಕಳ ಮಾತಕೇಳಿ ಭೂಕಾಂತ ದಟ್ಟಿಸಿ ಕೇಳುವ । ನಿಂತು ।
ತಪ್ಪಿಸಿಕೊಂಡು ಪೋಗುವ ।
ತನ್ನಯ ಸೆಟೆಯ ಗಾಯವನ್ನೆ ತೋರಿ ।
ಕುಂತೀ ಸುತ ತಪ್ಪಿಸಿಕೊಂಡು ಪೋಗುವ ॥146॥

ರಾಗ ಕೇದಾರಗೌಳ ಏಕತಾಳ

ಕುರುಪತಿ ತನುಜರೆಲ್ಲರು ಬಂದಾಗ । ಮರುತ ಸುತನ ಕಂಡರು ॥
ದುರುಳ ಸಿಕ್ಕಿದನೆನುತ । ಆ ಭೀಮನ । ಕರದ್ವಯವ ಬಿಗಿದರಂದು ॥147॥

ಉರಗನ ವಿಷಗಳನ್ನು ಕಜ್ಜಾಯಕೆ । ಬೆರಸಿ ಇಕ್ಕಿದರಂದು ॥
ಹರುಷದಿ ಸವಿದುಂಡನು ಆ ಮಾರುತಿ । ವರ ಸುಧೆಯಾಯಿತೆಂದನು ॥148॥

ಕಾಳಕೂಟವ ಕೊಟ್ಟರು । ಆ ಭೀಮಗೆ । ಹಾಲುಂಡವೋಲಾಗಲು ।
ಬೀಳಿಕ್ಕಿದರು ಜಾಲಕೆ । ಮೇಲೆದ್ದು ಬಂದು । ಕಾಲೊಳು ಕೊಲುತಿದ್ದನು ॥149॥

ಎಲ್ಲಿ ಕಂಡರು ಮಕ್ಕಳ । ಕರೆ ಕರೆದು । ಕೊಲ್ಲುವ ಮರುತ ಸೂನು ॥
ಇಲ್ಲಿರಲಾರೆವೆಂದು । ಗಂಗಾಸುತ । ಗೆಲ್ಲರು ಪೇಳಿದರು ॥150॥

ವಚನ

ಇಂತೆಂದು ಇವರುಗಳು ಇತ್ತಲಾಗಿ ಈ ಪ್ರಕಾರದಿಂದಿರುತಿರಲಾಗಿ । ಅತ್ತಲಾ ದ್ರೋಣನೈತರು ತಿದ್ದನೆಂತೆನೆ-

ರಾಗ ಸೌರಾಷ್ಟ್ರ ಅಷ್ಟತಾಳ

ಭಾರದ್ವಾಜ ಪುತ್ರ ಧೀರ ದ್ರೋಣಾಂಕ ಕುಮಾರಗೂಡಿ ।
ಸೇರಿದ ದ್ರುಪದನ ಪಟ್ಟಣಕೆ ॥
ದಡ್ಡಿ ಚಾರರು ನೋಡಿ । ಎಲ್ಲಿಗೆ ಗಮನವೊ ನಿಲ್ಲು ನಿಲ್ಲೆಲವೊ ।
ಭೂವಲ್ಲಭನು ಕೊಲುವ ನಮ್ಮನು ಬಲ್ಲಜಾಣಗೆ ತರವಲ್ಲ ಕಾಣೋ ॥151॥

ವಚನ

ಇಂತೆಂದ ಬಾಗಿಲವರೊಡನೆ ದ್ರೋಣರು ಇಂತೆನುತಿದ್ದನು -

ಕಂದ

ದೊರೆಗಿಂತೆಂದು ವಿವೇಕದಿಂ ।
ದರುಹುಗುಂ ದ್ರೋಣಾಂಕನಾಂ ಬಂದಿಹೆ ।
ನಿರುತ ಭೋಜನವೆಂಬುದೆ ।
ಅಗಲಿದೆ ಪಾಂಚಾಲ ಪುಣ್ಯಾತ್ಮನ ಬರವಾ ।
ಗಲರುಹ ಸೇವಕ ಪ್ರಿಯಸಖನಂ ।
ಕಂಡಾನು ಸಂತೋಷಿಪೆಂ ದೊರೆಗಿಂತು ।
ಪುರದತ್ತ ಪೋಗಿ ಬಳಿಕಾಂ ।
ದೈತ್ಯಾರಿ ಕಾವಂ ದಿನಾ ॥152॥

ರಾಗ ದ್ವಿಪದಿ ಝಂಪೆತಾಳ

ಜೀಯ ಚಿತ್ತವಧಾನ ಜನ್ನಮುನಿಗೆ ಸಮಾನ ।
ಆಯಿತೀಕ್ಷಣ ಬಂದ ದಾರಿಯೇನೆಂದ ॥153॥

ಬಾಲತ್ವ ಸಖನು ಗಡ ಬಡತನವಡಸಿತು ಗಡ ।
ಭೂಲೋಲ ವಳಗಿಂದು ಬಿಡಲೇ ಎಂದ ॥154॥

ವಚನ

ಇಂತೆಂದ ಮಾತ ಕೇಳಿ ದ್ರುಪದ ಏನೆನುತಿದ್ದನು -

ರಾಗ ಸೌರಾಷ್ಟ್ರ ಏಕತಾಳ

ಏನ ಪೇಳಿದೆ ನೀನು । ಮಾನವೇಂದ್ರನು ನಾನು ।
ದಾನ ವಿಪ್ರನು ಸಖನೇನೊ ॥
ಆನೆಗೆ ಸರಿಯಾಗಿ । ಕಾನನ ನರಿಯು ।
ಬಹುದೇನೆಲೊ ದಡ್ಡಿಯ ಚರನೆ ॥155॥

ಗರುಡ ದೇವನು ಎತ್ತ ಗರಿಯುಳ್ಳ ಹದ್ದೆತ್ತ ।
ಉರಗನೆತ್ತಲು ಒಳ್ಳೆಯೆತ್ತ
ತಿರುಕ ಹಾರುವನೆತ್ತ । ಅರಸ ತಾನೆತ್ತಲು ।
ಒರೆದೆಲ್ಲೊ ಸಖನೆಂದು ಎನಗೆ ॥156॥

ಕುಟ್ಟೋ ಬಾಯನು । ಹೊಯ್ಯೋ ನಾಲಿಗೆಯ ಕೊಯ್ಯೋ ।
ಕಟ್ಟೋ ಈ ಬಾಗಿಲ ಚರನ ॥
ಮೆಟ್ಟಿ ತುಳಿಯೋ ಎಂಬ ಮಾತ ಕೇಳಿ ತಾನಾಗ ।
ತಟ್ಟನೆ ಬಂದು ಗರ್ಜಿಸಿದ ॥157॥

ರಾಗ ದ್ವಿಪದಿ ಝಂಪೆತಾಳ

ತಿರುಕ ಹಾರುವ ನಿನ್ನ ಕಡೆಯಿಂದ ನಾನು ।
ಅರಸಿನೊಳು ಎನಿಸಿ ಕೊಂಬುದ ಪೇಳ್ವೆಯೇನು ॥158॥

ಎನುತ ಕೈವಿಡಿದು ದೂಡಲು ರೋಷದಿಂದ ।
ತನಯನನು ಕರಕೊಂಡು ತಟ್ಟನೈತಂದ ॥159॥

ಮುಟ್ಟಿದರೆ ಕೆಲರ ಕೊಂದೆನು ।
ಮುಟ್ಟಿದರಾಗಲೆ ಕೆಲರು ಕೂಗುತ್ತಲಿರಲು ॥160॥

ಆದಿತ್ಯ ದ್ರೋಣಾಂಕ ನಡೆದನು ।
ಒಳಯಕ್ಕೆ ದ್ರುಪದ ಭೂಪನ ಕಂಡನು ॥161॥

ವಚನ

ಕುರಿಯೆ ನಮ್ಮೊಳು ಮೊದಲು ವಿದ್ಯವ ಕಲಿತ ಚೆನ್ನಿಗನಂ । ನಿನ್ನಡೆಗೆ ಕಳುಹಿ । ತವ ಚರಣಂಗಳಂ ಚೆನ್ನಾಗಿ ಬಿಗಿಸಿ ಕೊಡುವೆನು ಕುನ್ನಿಯೆ ನಿಲ್ಲು ನಿಲ್ಲೆಂದ ದ್ರೋಣ ॥

ರಾಗ ಸೌರಾಷ್ಟ್ರ ಅಷ್ಟತಾಳ

ಎಂದುಗ್ರ ಕೋಪದಿ ಸಿಂಧು ನಗರ । ಕೈ ತಂದ ಬೇಗ । ಕುವರರ ॥
ವಂದವ ಕಂಡಾಗ ನಂದನ । ಸಹಿತಾಗ । ನಿಂದನಾಗ ॥162॥

ವಚನ

ಯಮ ತನುಜ ಭೀಮ ಪಾರ್ಥರು ಕೌರವರು ನೂರ್ವರು ಆಟದೆಡೆಯಲ್ಲಿ ವಿಮಲ ಕೂಪದಲ್ಲಿ ಮುದ್ರಾಕ್ರಮವಿಡಿದಿಹ ಉಂಗುರವು ಬೀಳೆ ಕಂಡಿಂತೆಂದರು -

ರಾಗ ಲಹರಿ ಏಕತಾಳ

ನಿನ್ನ ಕೈಯ್ಯ ಸಾಗದೆಂದನೊಬ್ಬ ಕುವರ ।
ಕಣ್ಣಸನ್ನೆಯಿಂದಿಳಿದು ಹೊಕ್ಕನಲ್ಲ ನೀರ ॥
ಇಳಿದು ಬಾವಿಯಿಂದಲೆದ್ದುಹೊಳೆದನಾಗ । ಅದ ।
ತಿಳಿದು ಮತ್ತೊಬ್ಬ ಬಾಲಕ ಸುಳಿದ ಬೇಗ ॥
ಘಳಿಲನೆ ಧುಮ್ಮಿಕ್ಕೆ ಎದ್ದು ಹೊಳೆದನಾಗ । ಉಂಗ್ರ ।
ವೆಳೆದು ಕೊಡುವೆನೆಂದನರ್ಥ ಭಾಗ ॥163॥

ವಚನ

ಇಂತೆಂದು ಈ ರೀತಿಯಲ್ಲಿ ಕಟ್ಟೆ ಬಿಡುವದಂ ಕಂಡು ದ್ರೋಣ ಅಶ್ವತ್ಥಾಮಂಗೆ ಕಣ್ಣು ಸನ್ನೆಯಂ ಮಾಡಲಾಗಿ ಏನ ಮಾಡುತ್ತಿದ್ದನು ಎಂದರೆ -

ರಾಗ ಶಂಕರಾಭರಣ ಪಂಚಘಾತ ಮಟ್ಟೆ

ಹುಲ್ಲ ಮಂತ್ರಿಸಿ ಬಿಟ್ಟನಲ್ಲಿ ।
ಉಂಗುರವೆಳೆದು ತರಲು ಕುವರ ವಂದ ನೆರೆದು ಹರುಷದಿಂದ ವಂದಿಸಿದರು ॥164॥

ಎಲ್ಲ ಶರದ ವೇದವನ್ನು ಬಲ್ಲ ಜಾಣರೆಂದು ಪೇಳ್ದ ।
ಸೊಲ್ಲ ಕೇಳಿ ಭೀಷ್ಮ ಕರೆಸಿ ನಿಲ್ಲಿರೆಂದನು ॥165॥

ದೊರೆ ದೊರೆಗಳ ಮಕ್ಕಳೆಲ್ಲ ಬರಲು ಕೋಟಿ ಸಂಖ್ಯೆಯಿಂದ ।
ತರ ತರಹದ ಸಾಧನೆಗಳ ಮಾಡುತಿದ್ದರು ॥166॥

ರಾಗ ದ್ವಿಪದಿ ಝಂಪೆತಾಳ

ಸೂತ ಭವನದಿ ಬೆಳೆದ ಕರ್ಣನೈತಂದು ।
ಈ ತರಳರೊಡನೆ ವಿದ್ಯವ ಕಲಿತನಂದು ॥167॥

ಇಂತೆಲ್ಲ ಕುವರರೊಂದಾಗಿ ಹರುಷದೊಳು ।
ಸಂತೋಷದಿಂದ ಕಲಿತಿರಲು ವಿದ್ಯೆಗಳು ॥168॥

ಧೃತರಾಷ್ಟ್ರಭೀಷ್ಮನೊಳು ಪೇಳೆ ಹರುಷದೊಳು ।
ಸುತರ ಪ್ರೌಢಿಕೆಯ ಪೇಳೆಂದು ವಿನಯದೊಳು ॥169॥

ಆಗೈದು ಯೋಜನಕೆ ನಿಂತುಕೊಂಡವರು ।
ಶರಮಲ್ಲ ವಿದ್ಯಗಳ ತೋರೆ ಹರುಷದೊಳು ॥170॥

ವಚನ

ಆಗಲಾ ಧೃತರಾಷ್ಟ್ರವಿನೆನುತಿದ್ದನು -

ರಾಗ ಲಹರಿ ಏಕತಾಳ

ಅರರೆ ಕುಮಾರರು ದಿಟ್ಟರು । ನಗುತ ।
ಗುರುವಿಗುಡುಗೊರೆಯನಿತ್ತರು ॥
ಶರದೊಳರ್ಜುನನೀಗ ಜಾಣನು । ಇವನ ।
ಸರಿಬಹ ಕರ್ಣನೊಡ್ಡಾರನು ॥
ದೊರೆ ಕುಮಾರರು ಮತ್ತೆ ಸಾಕಯ್ಯ । ನಮ್ಮ ।
ಕುರುವಂಶಕ್ಕೆಣೆಯುಂಟೆ ನೋಡಯ್ಯ ॥171॥

ಮಲ್ಲಯುದ್ಧದಿ ಭೀಮ ನಿಪುಣನು । ಇವನು ।
ಬಲ್ಲಿದನಹುದು ಕರುರಾಯನು ॥
ಎಲ್ಲ ಸುತರು ಸುಗುಣವಂತರು । ನಗುತ ।
ಅರರೆ ಕುಮಾರರು ದಿಟ್ಟರು ॥172॥

ವಚನ

ಆಗಲಾ ಧತರಾಷ್ಟ್ರನು ಪೇಳಲಾಗಿ ಕುಮಾರರೊಡನೆ ದ್ರೋಣ ಏನೆನುತಿದ್ದನು -

ರಾಗ ಕೇದಾರಗೌಳ ಏಕತಾಳ

ಭಲರೆ ಮಕ್ಕಳಿರೆಲ್ಲ ಕುಲತಿಲಕಗಳು ನೀವು ।
ಇಳೆಯೊಳು ಚೆಲುವ ರಾಜರು ನೀವೆನೆ ॥
ಇಂತು ಭೂಪಾಲರೆಲ್ಲ ಕೇಳ್ದು ಸಂತೋಷದಿಂ ।
ತಮ್ಮ ಗಹಾಂತರಕೈದಲು ದ್ರೋಣ ।
ನಿಂತ ಶಿಷ್ಯರ ತಿಂಥಿಣಿ ಕಂಡು ತನ್ನ
ಪಂಥದ ನುಡಿಯ ನೆನೆದು ।
ದಂತಿಪುರದರಸರೊಳು ಇಂತೆಂದನಾಗ ॥173॥

ಎಲ್ಲ ಮಕ್ಕಳೆಲ್ಲ ಬನ್ನಿ ಸೊಲ್ಲ ಕೇಳಿ ।
ಗುರುದಕ್ಷಿಣೆಯಲ್ಲಿ ನನ್ನೊಡಂಬಡಿಸಲಿಲ್ಲವೆಂದು ।
ಬಲ್ಲಿದರು ನೀವೆಂದೆವೇನಿಲ್ಲವೇ ।
ನೀವೇನ ಪೇಳ್ದರು ಇಲ್ಲವೆಂದೆವೆ ನಿರೂಪಿಸೆಂದರು ॥174॥

ವಚನ

ಆಗಲಾ ದ್ರೋಣ ಏನೆನುತ್ತಿದ್ದನೋ – ಮಕ್ಕಳಿರಾ ಕೇಳಿರಯ್ಯ ಚಿಕ್ಕಂದೆಮ್ಮೊಡನೆ ವಿದ್ಯವ ಕಲಿತ ದ್ರುಪದ ಗಹಕ್ಕಾನು ಪೋಗೆ ಎನ್ನನುಂ ಧಿಕ್ಕರಿಸಿ ನುಡಿದನು ಆ ಸಮಯದಿ -

ಝಂಪೆ

ಎನ್ನೊಡನೆ ವಿದ್ಯವ ಕಲಿತ ಚೆನ್ನಿಗನ ಕೈಯಿಂದ ।
ನಿನ್ನ ಬಿಗಿತಹೆನೆಂದು ಭಾಷೆ ಪೇಳಿದೆನು ॥175॥

ಆ ಮಾತ ಸಲಿಸಿ ಕೊಡಬೇಕೆಂದು ಪೇಳೆ ।
ಭೂಪಾಲಸೂನು ಕೌರವನು ಎದ್ದ ।
ಬಳಿಕಿಲ್ಲಿ ತಹೆನೆಂದನುಜರೊಡನೆ ಸಂತಸದಿ ಬಂದ ॥176॥

ವಚನ

ಆಗಲಾ ಕುರುಪತಿ ಪಾಂಚಾಲಪುರಮಂ ಪೊಕ್ಕು ಏನುಮಾಡುತ್ತಿದ್ದನು -

ಶಂಕರಾಭರಣ ಪಂಚಘಾತ ಮಟ್ಟೆತಾಳ

ನಮ್ಮ ಗುರುವಿನಾ । ಹೆಮ್ಮೆಯಿಂದಲಿ ।
ಒಮ್ಮೆ ಬಯ್ದ ಪಾಪಿ ಬರಲಿ ಘಮ್ಮನೀಕ್ಷಣ ॥177॥

ಕೊಲ್ಲುವೆನೆಂದ । ಮಾತ ಕೇಳುತ ।
ತೊಟ್ಟುಶರವ ಕೌರವನಿಗೆ ಬಿಟ್ಟನಾಕ್ಷಣ ॥178॥

ಬಾಣತಾಗಲು । ಕ್ಷೋಣಿಪಾಲರು ।
ತ್ರಾಣಗುಂದಿ ತಮ್ಮ ಪುರಕೆ ಮಾಣದೈದಲು ॥179॥

ಬಂದು ಗುರುವಿನಾ । ಮುಂದೆ ನಿಂದನು ।
ಇಂದ್ರಸುತನನೋಡೆ ಗುರುವಿಗೊಂದಿಸಿದನು ॥180॥

ಎಲ್ಲಿ ಹೋದನೊ । ಎನುತ ಕಟ್ಟಿದ ।
ನಿಲ್ಲು ಎನುತ ಪಾಂಚಾಲನ ಮನೆಯ ಹೊಕ್ಕನು ॥181॥

ಎಲ್ಲಿ ಚೋರನು । ಎನುತ ಕಟ್ಟಿದ ।
ನಿಲ್ಲದಾಗ ಗುರುವಿನೆಡೆಗೆ ತಂದು ಚಾಚಿದ ॥182॥

ವಚನ

ಇಂತೆಂದು ಆಗ ದ್ರೋಣ ಏನೆನುತಿದ್ದನು -

ರಾಗ ಮಾರವಿ ಏಕತಾಳ

ಅಮ್ಮಮ್ಮ ಇವ ದೊಡ್ಡ ಹೆಮ್ಮೆಯ ರಾಯನು ।
ನಮ್ಮ ಪಾದಕ್ಕೆ ಬೀಳಬಹುದೆ ॥
ನಮ್ಮ ನಿಂದಿಸಿದಂಥ ಎಮ್ಮೆಯ ಪುತ್ರನು ।
ದಮ್ಮಯ್ಯ ನೋಡೆಂದ ಪಾರ್ಥ ॥183॥

ಏನೆಲೊ ಇಂದ್ರಜ ನೀನಿಂದಿವನ ಕಟ್ಟಿದೆ ।
ನೋಡಲಾರೆನೆಂದನಾ ದ್ರೋಣ ।
ಹೀನ ತಪ್ಪಿದರೇನು ಪಾಪಗಳಿಲ್ಲ ।
ದ್ರೋಣ ನೋಡೆಂದನರ್ಜುನನು ॥184॥

ತಿರುಕ ಹಾರುವ ನಾನು ಚರಣಕ್ಕೆ ಬೀಳುವರೆ ।
ಮರೆತನು ಮುನ್ನಿನ ಮಾತ ॥
ಗುರುದ್ರೋಹಿ ಪರಸತಿಯರನು ಚಿಂತಿಸುವಗೆ ।
ಅರುವೆ ಮರವೆಗಳು ಸಹಜ ॥185॥

ಪುರುಹೂತ ನಂದನ ದುರುಳನ ಕಳುಹೆಂದು ।
ಗುರು ಪೇಳಲಾಕ್ಷಣ ಬಿಟ್ಟು ॥
ಅರಸಾದ ದ್ರುಪದ ರಾಯನು ಮರುಗುತ್ತ ।
ತನ್ನ ಪುರವ ಹೊಕ್ಕನು ಚಿಂತಿಸುತ ॥186॥

ರಾಗ ಕೇತಾರಗೌಳ ಏಕತಾಳ

ಏನಮಾಡಲಿ ನಾನಿಂದು । ಶಿವನೆ ನಾ
ನೇನ ಮಾಡಲಿ ನಾನಿಂದು ॥
ಏನಮಾಡಲಿ ಎನ್ನ ಮಾನಭಂಗವ ಮಾಡಿ ।
ಆ ನರ ಕಟ್ಟಿದ ದ್ರೋಣಗೆ ಯೋಚಿಸಿದ ॥ ಏನ ... ||187||

ಎನ್ನ ಕಟ್ಟಿದ ದೊಡ್ಡ ಚೆನ್ನಿಗನಿಗೆ ಒಬ್ಬ ।
ಕನ್ನಿಕೆಯನೀಯದೆ ಇನ್ನಿರಲಾರೆ ।
ಆತನ ಗುರುವನು ಘಾತಿಸುವ ಪುತ್ರನ ।
ವೀತಿ ಹೋತ್ರನಾದರು ತಾ ತನಗೀಯನೆ ॥ ಏನ ... ||188||

ವಚನ

ಇಂತೆಂದು ಪಾಂಚಾಲಭೂಪ ಯಾಜೋಪಯಾಜಕರಿಂದ ಯಜ್ಞಮುಖದಿಂದ ಪಡೆದಿರುತ್ತಿರಲಿತ್ತಲಾಗಿ ಕೌರವ ಏನೆನುತಿದ್ದನು -

ರಾಗ ದ್ವಿಪದಿ ಝಂಪೆತಾಳ

ಜನನಿ ಯಾತಕೆ ಪೆತ್ತಳೆಂದು ।
ಈ ಭೂಮಿಯೊಳು ವನಜ ಭವ ಏನೆಂದು ॥189॥

ಬರೆದ ಫಣೆಯೊಳಗೆ ಪಾಂಚಾಲ ।
ಭೂಪನ ಕಟ್ಟಿ ತಂದನಾ ಪಾರ್ಥ ॥190॥

ಚಂಚಲ ಮನದಿಂದ ಹೆದರಿ ।
ಬಂದೆನೆಂದು ಇದಕೆ ಪ್ರಾಯಶ್ಚಿತ್ತವೇನೆಂದು ಶಕುನಿಯನು ॥191॥

ಮುದದಿಂದ ಬೆಸಗೊಂಡ ಆತನುಸುರಿದನು ।
ಪಾಂಡು ಭೂಪರ ನೀನು ಹಲವು ಬಗೆಯಿಂದ ।
ರೂಪಗೆಡುವ ತೆರನ ಮಾಡಬೇಕೆಂದ ॥192॥

ಎಂದ ಮಾತುಳನಿಗೆ ವಂದಿಸಿ ಕೌರವನು ।
ಚಂದದಿಂದರಗಿನ ಮನೆಯ ಮಾಡಿದನು ॥193॥

ವಚನ

ಇಂತೆಂದು ಅಂಧಭೂಪತಿ ತನ್ನವರೊಳೊಂದಾಗಿ ಕಳಿಯದು ಎಂದು ಪೇಳ್ದನಾಗ -

ರಾಗ ಶಂಕರಾಭರಣ ತ್ರಿವುಡೆತಾಳ

ಇಂದು ನಿಮ್ಮವರಿಗೆ ಅರಮನೆ ।
ಯೊಂದಿಹುದು ನೀವೆಲ್ಲವೈದುವು
ದೆಂದು ಪೇಳಲು ಕೇಳಿ ಬಂದರು ಕುವರರಾಗ ॥194॥

ಇವರು ಕುಟಿಲವದೇನು ಬಲ್ಲರು ।
ಅವರು ಸಂಭ್ರಮದಿಂದ ರಾಜ ।
ಭವನದೊಳಗೀರೇಳು ತಿಂಗಳು ಮೇಲೆ ಒಂದು ದಿನ ॥195॥

ವಚನ

ಕಂಡು ಕುರುಪತಿ ಪುರೋಚನಂ ಅರಗಿನಮನೆಗೆ ಅಗ್ನಿಯನಿಕ್ಕುಯೆನಲಾ । ದುರುಳನೈತಂದು ವೈಶ್ವಾನರನಂ ಮುಟ್ಟಿಸೆ ಜ್ವಾಲೆ ನೆಗೆಯಿತ್ತು ನಭವಾ । ತಿರುದುಂಡು ಒಬ್ಬ ಕನ್ನೆ ತರಳರೈವರಂ ಕೂಡಿಕೊಂಡಾ ಗಹದೊಳು । ಮೈಮರದು ಮಲಗಿರಲು ಸುರತರುಣಿಯರೊಡನೆ ಸಂದರೇನು ವಿಚಿತ್ರವೋ । ಆಗಲಾ ಧರ್ಮಜ ಮೊದಲಾದವರೆಲ್ಲ ಏನು ಮಾಡುತ್ತಿದ್ದರು -

ರಾಗ ಶಂಕರಾಭರಣ ತ್ರಿವುಡೆತಾಳ

ಕುಂತಿಯಾತ್ಮಜರೆಲ್ಲ ಆ ದಿನ ।
ಕಂತು ಜನಕನ ಪದಕೆ ನಮಿಸಿ ಗ ।
ಹಾಂತರದಿ ಮಲಗಿರಲು ಬಂದನು ವೀತಹೋತ್ರ ॥196॥

ಭಿತ್ತಿಗಳು ಜರಿಜರಿದು ಬಿದ್ದವು ।
ಮತ್ತೆ ನೆಲಗಟ್ಟುಗಳು ಬೆಂದವು ।
ಇತ್ತ ನೋಡೆ ಕವಾಟಗಳ ನೆಲೆ ಕಾಣದಾಯ್ತು ॥197॥

ಶಿವ ಶಿವಾ ಎನುತೆದ್ದು ಭೀಮನು ।
ಅವನಿಪನು ಸಹಿತೈದು ಮಂದಿಯು ।
ನವಕವಾಟವ ತೆಗೆದು ಹೊಕ್ಕನು ಘೋರ ಕಾನನಕಾಗಿಯು ॥198॥

ಬರುತ ಬಟ್ಟೆಯೊಳಲ್ಲಿ ಭೂಪನ ।
ಚರಣ ಜರಿದುದು ಪಾದ ನೊಂದುದು ।
ಮರುಗಿದರು ಮಾದ್ರಿಜರು ಕುಂತಿಯು ನಿಂದಳಲ್ಲಿ ॥199॥

ಇನಿತು ಸಂಕಟವೆತ್ತಿತೆಂದರು ।
ಅನಿಲನಂದನನಾಗಲೈವರು ।
ಘನ ಭುಜಾಗ್ರದೊಳೌಕಿ ನಡೆದನು ಕಾನನದಲಿ ॥200॥

ವಚನ

ಇಂತೀ ತೆರದಿಂ ಬಂದು ಭೀಮನು ಒಂದು ವಟವಕ್ಷದಡಿಯಲ್ಲಿ ಇವರನೆಲ್ಲ ಮಲಗಿಸಿ ಕಾದಿರಲು ಆ ವನದರಸ ಹಿಡಿಂಬ ನರಮನುಜರ ಕಂಪನಾಘ್ರಾಣಿಸಿ ತನ್ನ ತಂಗಿಯೊಡನೆ ಏನೆನುತಿದ್ದನೋ -

ರಾಗ ದ್ವಿಪದಿ ಝಂಪೆತಾಳ

ಕೇಳೆನ್ನ ಬಂಗಾರೆ ಕೇಳಿತ್ತ ಬಾರೆ ।
ಏಳು ಮುಂದಿಹರಾರು ನೋಡಿ ನೀ ಬಾರೆ ॥201॥

ಎನಲು ಹಾ ಎನುತಂದು ಎನ್ನ ಪುಣ್ಯವೆ ಯೆಂದು ।
ಅನಿಲಜನ ಇದಿರೆ ಬಂದಾಗಲ್ಲಿ ನಿಂದು ॥202॥

ಮರುತಾತ್ಮಜನ ನೋಡಿ ಮತ್ತೆ ಮಮತೆಯ ಮಾಡಿ ।
ಸರಸ ವಾಕ್ಯವನಾಡಿ ಸುಳಿದಳಾ ಪ್ರೌಢಿ ॥203॥

ರಾಗ ಪಾಡಿ ಏಕತಾಳ

ಬಂದು ರಕ್ಕಸಿ । ಭೀಮನ ॥ ಮುಂದೆ ನಿಂದಳು ।
ಎತ್ತಣಿಂದ ಬಂದಿರಯ್ಯ । ಚಿತ್ತಜರೂಪರು ನೀವು ।
ಸುತ್ತಮಲಗಿಹರಾರೆನ್ನುತ್ತ ಕೇಳಿದಳು ॥204॥

ಉತ್ತರವ ಕೊಡದೆ ಭೀಮ । ಮತ್ತವಳ ನೋಡದಿರ್ದರು ಸಾರಿ ।
ಉತ್ತುಂಗ ಕುಚವ ತೋರಿ । ಹತ್ತಿರಕೆ ಸಾರಿ ॥205॥

ಯಾರೆಂದು ಕೇಳುವ ವಿಚಾರವೇತಕತ್ತ ಸಾರೆ ।
ನಾರಿ ನೀನ್ಯಾವಳೆಂದು ಮಾರುತಿ ಕೇಳೆ ।
ಧೀರ ಹಿಡಿಂಬನನುಜೆಯರು ಮುರಿದು ತಿಂಬೆನೆಂದು
ಸಾರಿ ಬಂದು ಸೋತೆ ನಿನ್ನ ಮೂರುತಿ ಕಂಡು ॥206॥

ನೀನು ನಾನೊಂದಾಗಿರುವಾಗ । ನಾನಾರ ತಿನ್ನಲಿ ಈಗ ।
ಏನ ಬೇಡಿದರು ನಿನಗೀವೆಂದಳು ॥207॥

ಮಾನಿನಿಯ ಮಾತ ಕೇಳಿ । ತಾನೆದ್ದು ನಿಂತನಿಲಜ
ಮೌನವ ತಾಳಿರೆಂದು । ಪೇಳಿದ ನುಡಿಯ ಕೇಳಿ ॥ ॥208॥

ರಾಗ ಕೇತಾರಗೌಳ ಏಕತಾಳ

ನಿನ್ನ ಕಂಡು ಪೋಗಲಾರೆ ಎಲೆ ನಲ್ಲ । ಈಗ ।
ಮನ್ಮಥ ಬಾಧೆಗೆ ಸಿಲುಕಿದೆನಲ್ಲ ॥209॥

ಹಣ್ಣ ಕಂಡು ಹಕ್ಕಿ ಬಿಡುವುದೆ ನಲ್ಲ । ಚೊಕ್ಕ ।
ಚೆನ್ನಸರ ಸಿಕ್ಕರೊಲ್ಲರೆ ನಲ್ಲ ॥210॥

ಹೆಣ್ಣೊಲಿಯೆ ವಂಚಿಪೆ ಯಾಕೆ ನಲ್ಲ । ಹಿ ।
ರಣ್ಯ ಗರ್ಭಮಾಡಿದ ಮಾಟವು ನಲ್ಲ ॥211॥

ಚರಣಕ್ಕೆರಗುವೆ ಮಾತನಾಡಯ್ಯ । ತರ ।
ಹರಿಸಲಾರದೆ ಮುತ್ತನೀಗ ಬೇಡಯ್ಯ ॥212॥

ರಾಗ ತೋಡಿ ಅಷ್ಟತಾಳ

ಮಾತನಾಡಬೇಡತ್ತ ಸಾರೆ । ಮಾನಿನಿ ಕಡು ಜಾರೆ ।
ಏತಕೆಲ್ಲ ನಿಂದೆ ರಕ್ಕಸಿಯನ್ನು ತಡೆಯಲಾರೆ ॥213॥

ರಕ್ಕಸಿಯೆಂದೆನ್ನ ಬೇಡ । ಕುಚಕ್ಕೆ ಕಯ್ಯ ನೀಡೋ ।
ಎಕ್ಕ ಸೊಕ್ಕಿನ ಮಾತು ಬೇಡೆಂದು । ಧಿಕ್ಕರಿಸುತ ನುಡಿದನು ॥214॥

ಅಕ್ಕಟಾ ನಾ ನಿನ್ನ ರೂಪವ ಕಂಡು । ಗಹಕ್ಕೆ ಪೋಗಲಾರೆನೆನಲು ।
ಸೊಕ್ಕಿನವಳೆಂದು ಭೀಮ ನಕ್ಕು ಸುಮ್ಮನಿರ್ದನು ॥215॥

ವಚನ

ಇಂತೆಂದು ಭೀಮನೊಡನೆ ಪ್ರಸಂಗಿಸಲು । ಇವಳ ಅಣ್ಣ ಹಿಡಿಂಬನು ಹೇಗೆ ಬರುತಿದ್ದನದೆಂತೆನೆ-

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕೋರೆ ದಾಡೆಯು ತೋರ್ವ ಮೀಸೆಯು ।
ಜೋರು ಮೋರೆಯದೋರುತ ।
ನೂರು ಮಂದಿಯ ನುಂಗಿ ನೊಣೆಯುವ ।
ಮಾರಿ ರಕ್ಕಸ ಬಂದನು ।
ಬಂದ ನೋಡೆ ರಕ್ಕಸ ಬಂದ ನೋಡೇ ॥216॥

ರಕ್ಕಸಾರ್ಭಟಿಸುತ್ತ ನಿಂದಿರೆ ।
ನಕ್ಕನಾ ಕಲಿ ಭೀಮನು ।
ಸೊಕ್ಕಿದೇತಕೆ ಕೂಗಬೇಡವೊ ।
ಕ್ಷಣದಿ ನಿಲಿಸುವೆ ಕೊಬ್ಬನು ।
ಒಂದ ನೋಡೆ ರಕ್ಕಸ ಬಂದ ನೋಡೇ ॥217॥

ರಾಗ ಶಂಕರಾಭರಣ ತಾಳ ಪಂಚಘಾತ ಮಟ್ಟೆ

ಎನ್ನ ಕೊಬ್ಬನು ನಿಲಿಸುವಾತನೋ । ಎಲವೊ ರಕ್ಕಸ ।
ಮಲಗಿದೈವರು । ಘಳಿಲನೇಳ್ವರಿತ್ತ ಬಾರೊ ಕೊಲುವೆನೆಂದನು ॥218॥

ಕೊಲ್ಲುವೆನೆಂದ । ಮಾತ ಕೇಳುತ ।
ಮಲ್ಲ ಭೀಮ ನೊಂದುಕೊಂಡು ಮುಂದೆ ನಿಂದನು ॥219॥

ನಿಲ್ಲದಾತನ । ಮಲ್ಲಯುದ್ಧದಿ ।
ಬಲ್ಲ ತನದಿ ಹಲ್ಲ ಮುರಿದು ಅಲ್ಲಿ ಹೆಣಗಿದ ॥220॥

ಹೆಣಗುತನಿಲಜಾ । ಕ್ಷಣಕೆ ಮನದೊಳು ।
ಗಣಿಸದಾಸುರಾಗ್ರಣಿಯ ನೀಕ್ಷಿಸಿ ॥ ಮರನ ಮುರಿದನು ॥221॥

ಕರವ ಪಿಡಿದನು ।
ದುರುಳ ರಾಕ್ಷಸನ್ನ ಬಡಿದು ಮರುಳಿ ಬಂದನು ॥222॥

ಬಡಿಯಲಾಕ್ಷಣ ಧಡ ಧಡಿಸುತಾ ।
ಪೊಡವಿಯಲ್ಲಿ ಕೆಡೆದು ಬಿದ್ದ ದಡಿಗ ರಾಕ್ಷಸ ॥223॥

ವಚನ

ಇಂತೀ ರಕ್ಕಸ ಬಿದ್ದ ಸದ್ದಿನಮೇಲೆ ಧರ್ಮಾರ್ಜುನರೆಲ್ಲ ಎದ್ದು ಏನೆನುತಿದ್ದರು -

ರಾಗ ಸೌರಾಷ್ಟ್ರ ತ್ರಿವುಡೆತಾಳ

ಏನು ಭೀಮಯಿದೇನು ಮಾರುತಿ ॥
ದಾನವನ ನೀನೊಬ್ಬ ಜಯಿಸಿದೆ ।
ಏನ ಮಾಡಲು ಬಹುದು ಶಿವ ಶಿವ ಎಂದರವರು ॥224॥

ತಮ್ಮ ಅವ ಬಂದಾಕ್ಷಣದಿ ನೀ ।
ನಮ್ಮನೆಬ್ಬಿಸದೇಕೆ ಮೊದಲೇ ।
ಅಮ್ಮ ಸಹಿತೈವರನು ಪೊತ್ತು ಬಳಲಿದವನು ॥225॥

ವಚನ

ಇಂತೆಂದು ಪೇಳಲಾಗಿ ಭೀಮ ಏನೆನುತಿದ್ದನೋ -

ರಾಗ ಕಲ್ಯಾಣಿ ತ್ರಿವುಡೆತಾಳ

ನಮ್ಮೇನ ಮಾಡುವನು ।
ಮಣ್ಣ ಕಚ್ಚಿದ ಹಿಡಿಂಬಕನು ತಾನು ।
ಮೊದಲೊಬ್ಬ ಸತಿಯ ಕಳುಹಿದನಿವನೀಗ ಅಣ್ಣ ॥226॥

ವಚನ

ಇಂತೆಂದು ಭೀಮ ಪೇಳಲಾಗಿ ಹಿಡಿಂಬೆ ಯೇನೆನುತಿದ್ದಳೂ ಯೆಂದರೆ -

ರಾಗ ಕಾಂಭೋಜಿ ಏಕತಾಳ

ಮಾತ ಕೇಳಯ್ಯ । ಇವನನ್ನು ಕಂಡು ।
ಸೋತೆ ನಾ ಬಂದು ಮುಂದೆ ನಾನೈತಂದೆ ।
ಮತ್ತೆ ನನ್ನಣ್ಣನು ನಿಮ್ಮ ತಿನ್ನಲು ಬಂದ ಕೊಂದನಿವನಿಂದು ॥227॥

ಇನ್ನವನ ಚಿಂತೆಯು ಎನಗಿಲ್ಲವೆಂದು ।
ಚೆನ್ನಿಗ ನೆರೆದರೆ ಸಾಕು ದಯಸಿಂಧು ।
ಮಾತ ಕೇಳಯ್ಯ ಇವನ ಕಂಡು ಸೋತೆ ನಾನಿಂದು ॥228॥

ರಾಗ ದೇಸಿ ಝಂಪೆತಾಳ

ಆಡಿದ ಮಾತನು ಕೇಳ । ಎನ್ನ । ಕೂಡ ದಯ ಮಾಡ ।
ನಮ್ಮ ನಿಮ್ಮ ಯೋಗ ನೋಡೆ ನೋಡೆ ॥
ರೂಢಿ ಮೆಚ್ಚರಿಂತವನ ಪಾಡಾದೆ ಪ್ರೌಢೆ ।
ನಾವು ಜೋಡಾದರೆ ಮೆರೆಯೆ ಮತ್ತೇನೆಂಬ ಕೂಡೆ ॥229॥

ವಚನ

ಇಂತೆಂದು ದೈನ್ಯ ವಚನಂಗಳಿಂದ ಬೇಡಿಕೊಳಲು ಆ ನುಡಿಗೆ ಭೀಮ ಒಡಂಬಡಿಸಲು ಕೇಳದೆ ಇರಲಾಗಿ । ವ್ಯಾಸರು ಬರುತ್ತಿರ್ದರದೆಂತೆನೆ -

ರಾಗ ಮೆಚ್ಚು ಬಹುಳ ಏಕತಾಳ

ಉಟ್ಟ ಕಷ್ಣಾಜಿನದಿಂದ । ಉರದ ರುದ್ರಾಕ್ಷಿಯ ಚಂದ ।
ಮೆಟ್ಟಿದ ಹಾವುಗೆಯಿಂದ ಮುನಿತಿಲಕನೈತಂದ ॥230॥

ನಿಟಿಲಾಕ್ಷನ ಭಜಿಸುತ । ಅಟವಿಯೊಳಿರುತಿರ್ದ
ವಟುಗಳ ಕೂಡೈತಂದ । ಘಟ ಸಮರ್ಥ ಮುನಿಯು ॥231॥

ಬಂದ ವ್ಯಾಸಮುನಿಗೊಂದಿಸುತ । ಪಾಂಡವರೆಲ್ಲ ನಿಂದಿರೆ ।
ಚಂದವೀಕ್ಷಿಸುತಿಂತೆಂದ ॥232॥

ಚೂರ್ಣಿಕೆ

ಏ ಭೀಮ ಕೇಳು ಈ ಮಹಿಯೊಳು ಪ್ರೇಮ ಪೇಳ್ಸುಮ್ಮಾನಗಳ ತಾಳಬೇಡ ।
ಈ ವನಿತೆಯಿಂದೊಬ್ಬ ಕುಮಾರ ಜನಿಸಿ ವೈರಿಗಳನ್ನು ।
ತಾನೋರ್ವ ಸಂಹರಿಸುವನು ॥

ರಾಗ ಸೌರಾಷ್ಟ್ರ ಏಕತಾಳ

ಎಂದು ಭೀಮನನಂದೊಡಂಬಡಿಸಿ ।
ಮುನೀಂದ್ರ ಪ್ರೇಮಗಂಟಿಕ್ಕಲು ಕಂಡು ।
ಚಂದದಿಂದಿರಲಾಗಲಾರತಿಗಳ ಹಿಂಡು ।
ಇಂದ್ರಜ ಯಮಜರಾನಂದದಿಂದಂದು ॥ ಶೋಭಾನ । ಶೋಭಾನವೆ ॥233॥

ವಚನ

ಇಂತಿರಲಾ ಅಮರಾಂಗನೆಯರು ಬಂದು ಮಂಗಳಾರತಿಯ ನೆತ್ತಿದರದೆಂತೆನೆ -

ರಾಗ (ಮಾಧ್ಯಮಾವತಿ ಏಕತಾಳ)

ಮಂಗಳಂ ಜಯ ಮಂಗಳಂ । ಮಾತಂಗ ಗಾತ್ರನಿಗೆ ।
ಮಂಗಳಂ ಜಯ ಮಂಗಳಂ ॥
ಪಂಕಜಾಕ್ಷಿಗೆ ಆ ಮುದ್ರಾಂಕಿತವಿತ್ತು ।
ಆ ಲಂಕೆಯೊಳ್ಮೆರೆದವಗೆ ಮಂಗಳಂ ।
ಲಂಕಾಧಿಯಕ್ಷ ಮುಖ್ಯರ ಕೊಂದ ರಾಮನ ।
ಕಿಂಕರನಾದಗೆ ಮಂಗಳಂ ॥234॥

ಸೀತೆಯ ಶಿರೋಮಣಿಯನು ರಘುವರಗಿತ್ತು ।
ಪ್ರೀತಿಯ ಪಡೆದವಗೆ ಮಂಗಳಂ ।
ತ್ರೇತಾಯುಗದಿ ಹರಿರೂಪಾದ ಹಯ ।
ಕುಂತಿಯ ಜಾತಗೆ ಮಂಗಳಂ ॥235॥

ಯಮತನುಜನನುಜಗೆ ಅರ್ಜುನನಗ್ರಜ ।
ಯಮಳರ ಅಣ್ಣಗೆ ಮಂಗಳಂ ।
ವನಚರನನುಜೆ ಹಿಡಿಂಬಾರಮಣಗೆ ।
ಮಂಗಳಂ ಜಯ ಮಂಗಳಂ ॥236॥

ವಚನ

ಆ ಮೇಲೆ ವ್ಯಾಸರು ತೆರಳಲಾಗಿ ಭೀಮ ಹಿಡಿಂಬೆಯರು ಹೇಗಿರುತಿರ್ದರದೆಂತೆನೆ -

ರಾಗ ಸೌರಾಷ್ಟ್ರ ಏಕತಾಳ ರಾಮಕ್ರಿಯೆ

ಭೀಮನ ಪ್ರಿಯದೊಳು ಕಾಮಿನಿ ಕರೆವಳು ।
ಆ ಮಹಾತ್ಮನ ತಳ್ಕಿಸುವಳು ।
ಕಾಮನ ಕಲೆಯೊಳು ನೇಮವಾಗಿರುವಳು ।
ಪ್ರೇಮದಿ ಮಾತನಾಡುವಳು ॥237॥

ತಕ್ಕಿಸಿ ಚುಂಬನದಿಂದ ।
ದಕ್ಕಿತು ತನಗಿಂದಾನಂದ ।
ಅಕ್ಕರ ಪ್ರಿಯದಿಂದ ಸಕ್ಕರದೂಟಯೆಂದು ।
ಪಕ್ಕನೆ ಸವಿದ ಮಾರುತಿ ಕಂದ ॥238॥

ನೋಡಿ ದಣಿಯಳೊಂದು ಗೂಡಿ ದಣಿಯಳ್ ಬಂದು ।
ಪಾಡಿದಳಂದು ನಿಂದು ।
ಗಾಡಿಕಾತಿ ಬಾರೆಂದು ।
ಜೋಡನಿಕ್ಕುವರಂದು ।
ಪ್ರೌಢ ಮಾರುತಿ ದಯಸಿಂಧು ॥239॥

ಕಂದ

ಇಂತಾರು ತಿಂಗಳಿರಲಾ ।
ಕಾಂತೆಗೆ ಜನಿಸಿದನು ಒಬ್ಬ ಸೂನು ।

ಘಟೋತ್ಕಚನೆಂಬ ನಾಮವನಿತ್ತು ।
ಕಾಂತಾರದೊಡೆತನವ ಕೊಟ್ಟನಾ ಭೀಮ ॥240॥

ರಾಗ ದ್ವಿಪದಿ ಝಂಪೆತಾಳ

ಅಂದಲ್ಲಿ ಪಶ್ಚಿಮಕೆ ಆನಂದದಿಂದ ।
ಬಲ್ಲಿದೈವರು ಕುಂತಿ ಬರಲು ಪುರವೊಂದ ॥241॥

ಅರಸುತ್ತ ಬರಲಾಗಲೇಕ ಚಕ್ರವನು ।
ಭರದಿಂದ ಪೊಕ್ಕನುವನರಸುತ್ತಲಿಹರು ॥242॥

ಒಬ್ಬ ವಿಪ್ರೋತ್ತಮನ ಮನೆಯೊಳಗೆಯಂದು ।
ಬಹಳ ಶೋಕವನು ತಾಳುತಿರಲಂದು ॥243॥

ಇದು ಯೇನು ಯೆಂದು ಕೇಳಿದಳು ವರವನಿತೆಯಂದು ॥244॥

ವಚನ

ಈ ರೀತಿಯಿಂದ ಕೇಳಿದ ಕುಂತಿಯೊಡನೆ ಬ್ರಾಹ್ಮಣನು ಏನೆಂದನೂ ಎಂದರೆ -

ರಾಗ ಸೌರಾಷ್ಟ್ರ ಏಕತಾಳ

ಏನು ಹೇಳಲಿ ತಾಯೆ ನಾಳೆ ಮಗನ ಮದುವೆ ।
ಈಗ ಬಂದಿಹುದು ಮಾರಿಯೊಂದು ॥
ದಿನ ದಿನ ತಪ್ಪದೆ ಕೊಡುವ ತೆರಿಗೆಯುಂಟು ನಾಳೆ ಬಂದಿಹುದು ಎನಗೆ ॥245॥

ಎಂದಮಾತನು ಕೇಳಿ ಕಾಂತೆ ಹರುಷ । ದಿಂದ ಎಂದಳು ತಾನತಿ ಬೇಗದಿಂದ ॥
ಭೂಸುರ ನೀನೇಕೆ ಮರುಗುವೆ ನಾನೀವೆನೋರ್ವನ ॥246॥

ಐದು ಮಕ್ಕಳಿಗನ್ನವೈದೆ ಗಳಿಲಾರೆ । ಐದರೊಳೋರ್ವನ ನೀವೆ ॥
ಐದಿಂದ್ರಿಯಕೆ ತಪ್ತಿಯೈದುವನೆ ಸಾಕ್ಷಿ । ಐದೆ ವಿಪ್ರನೊಳೆಂದಳಾಗ ॥247॥

ಏನವ್ವ ನಿನ್ನ ಸೂನುವ ನೀನೀವೆಯ । ಈ ನಡತೆಯ ಕಂಡುದಿಲ್ಲ ॥
ಮಾನವ ಬೇಡಲು ದಾನವ ನಿನ್ನ । ಚಿಣ್ಣನ ನೀವರಿದು ನೀತವೇನೆ ॥248॥

ವಚನ

ಎಂದ ಮಾತಿಗೆ ಕುಂತಿ ಏನೆಂದಳು ಎಂದರೆ -

ರಾಗ ದ್ವಿಪದಿ ಝಂಪೆತಾಳ

ಇನಿತೇಕೆ ಚಿಂತೆ ಕೇಳಿದರೆ ಭೂಸುರನೆ ।
ನಿನಗೆ ರಕ್ಕಸ ಭಯವೆ ಬೇಡ ಕೇಳಯ್ಯ ॥249॥

ಮದುವೆಗೆ ಸಮಸ್ತ ವಸ್ತುಗಳನ್ನು ತರಿಸು ।
ಬುಧ ಶಿರೋಮಣಿ ಕೇಳು ಬ್ರಾಹ್ಮಣರ ಕರೆಸು ॥250॥

ರಕ್ಕಸಗೆ ಬೇಕಾದ ಭಕ್ಷ್ಯ ಭೋಜ್ಯಗಳ ।
ತಟ್ಟನೆ ಅಣಿಗೊಳಿಸು ಹೇಳಿ ಫಲವಿಲ್ಲ ॥251॥

ಪಂಕಜಾಸನನ ಲಿಖಿತ ತಪ್ಪುವುದೆ ನಾ ।
ಸುಮ್ಮನಿದ ಕೇಳಿ ಹೋಹಳಲ್ಲೆನೆ ತನ್ನ ಕ್ಲೇಶಮಂ ವಿಪ್ರ ಪೇಳಿದನು ॥252॥

ಊರ ಹೊರಗೊಂದು ವಿಪಿನಾಂತರದೊಳು ।
ಮಾರಿ ಬಕಾಸುರನಿಹನು ॥253॥

ಕೇರಿ ಮನೆ ಮನೆ ತಗ್ಗದನ್ನವ ಚೋರ ರಕ್ಕಸನುಂಬ ತಾಯೆ ।
ದಿನಕೊಬ್ಬ ಮನುಜ ಹನ್ನೆರಡು ಖಂಡುಗದನ್ನ ।
ಘನವಾದ ಶಾಖಗಳನುಂಬ ॥254॥

ಎನಗೊಬ್ಬ ಪುತ್ರನಾತಗೆ ನಾಳೆ ಮದುವೆಯು ।
ಎನಗೆ ಬಾರಿಯ ದಿನವು ನಾಳೆಯಮ್ಮ ॥255॥

ವಚನ

ಇಂತೆಂದ ಮಾತ ಕೇಳಿ ಕುಂತಿಯೇನುತಿದ್ದಳು -

ರಾಗ ಸೌರಾಷ್ಟ್ರ ಏಕತಾಳ

ಭೂಸುರ ಕೇಳಿದೇತರ ಕಷ್ಟವು ।
ನೀ ಸುಮ್ಮನಿರು ಚಿಂತೆಬೇಡ ।
ಆ ಶಿವನೈದು ಸುತರನಿತ್ತ ನಿತ್ಯದಿ ।
ಒಡಲ ಹೊರೆವುದತಿ ಕಷ್ಟ ॥256॥

ಈ ಪರಿ ಹೇಳುವುದೇನೆಲೆ ತಾಯೆ ।
ಬರಿದೆ ಕಾಡಬೇಡಮ್ಮ ।
ಭರದಿಂದ ವಿಧಿ ತಾನೆ ಬಲ್ಲ ।
ಕರಕರಿಸಬೇಡ ತೆರಳು । ಬರಿಯ ಮಾತಲ್ಲೆನಲು ॥257॥

ವಚನ

ಇಂತೆಂದು ಬ್ರಾಹ್ಮಣ ಅಳುವದಂ ಕೇಳಿ ಕುಂತಿಯೇನೆನುತಿದ್ದಳು -

ರಾಗ ಸೌರಾಷ್ಟ್ರ ಏಕತಾಳ

ಯಾತಕೆ ಭೂಸುರ ಚಿಂತೆಯನಾಂತಿಹೆ ।
ಮಾತನಾಡೆಂದಳು ಕುಂತಿ । ಮಾತನಾಡುವುದೆಲ್ಲಿ ಬ್ರಹ್ಮತೇಜವನು ॥258॥

ಅನಕ ಮತ್ತೊಬ್ಬ ಧರಣಿ ಸುರನ ।
ಮನೆಯ ಬಿಡಾರವನು ಮಾಡಿ ಪಾಂಡುವಿನ ॥259॥

ಮಕ್ಕಳೈವರು ನಿತ್ಯ ಮಜ್ಜನವ ಧರಿಸಿ ।
ರಕ್ಕಸಾರಿಯ ಪಾದರಜಕೆಲ್ಲ ನಮಿಸಿ । ಭಿಕ್ಷಾನ್ನವೆತ್ತಿ ಆ ಭೀಮಗರ್ಧವನು ॥260॥

ತತ್ ಕ್ಷಣದೊಳಿತ್ತು ಆ ಐದು ಮಕ್ಕಳನು ।
ಸಂತೈಸಿಕೊಂಡಿರುವ ಸಮಯದೊಳು ಇರುಳು ।
ಅಳುವ ಭೂಸುರನೆಡೆಗೆ ಅಲ್ಲಿಗೈದಿದಳು ॥261॥

ರಾಗ ಪಾಡಿ ಏಕತಾಳ

ಯಾಕೆ ಮರುಗುವೆ ನೀ ಪೇಳೆನಗೆ ಪೇಳು ।
ನಾ ಕಂಡು ಪೋಗುವವಳಲ್ಲ ಆ ಕಮಲಾಕ್ಷ ಬಲ್ಲ ॥262॥

ಕುರುಡನ ಮುಂದೆ ಸಣ್ಣಕ್ಕಿಯನ್ನಗಳನ್ನು ಬಂಡಿಯಲಿರಿಸು ।
ನನಗೊಬ್ಬ ಸುತನಿಹನು ದಷ್ಟ ದಾರಿದ್ರ ।
ದಿನ ಹೊರೆಯಾರೆನು ಕೊಟ್ಟೆನಯ್ಯ ॥263॥

ಊರೊಳೈವರು ಬೇಡಿದನ್ನಗಳನ್ನೆಲ್ಲ ।
ಮಾರಿಸುತನುಣುತಿಹನು ಸಾಕಾಯಿತಲ್ಲಿ ।
ಸರ್ವಥಾ ನಿನಗವನ ಕೊಟ್ಟೆನೆಂದು ।
ಊರ್ವಿಸುರ ಈ ನುಡಿಯ ನಚ್ಚಿ ದಯಸಿಂಧು ॥264॥

ವಚನ

ಇಂತೆಂದು ವಿಪ್ರೋತ್ತಮನ ಒಡಂಬಡಿಸಿ ಕುಂತಿಯು ಬಂದು ತನ್ನ ಬಾಲಕರೊಡನೆ ಏನೆನುತ್ತಿದ್ದಳು-

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕಂದಗಳಿರ ಕೇಳಿರಯ್ಯ ಒಂದು ಸುದಿ್ದಯ ತಿಳಿದು ಬಂದೆ ।
ಇಂದು ಎನ್ನಯ ಭೀಮನಿಗೆ ಪಾರಣೆಯು ಬಂತು ॥265॥

ಎನಲು ಚಪ್ಪರಿಸಿದನು ಭೀಮನ ।
ಜನನಿಯೇನೇನೆಂದು ನುಡಿಯಲು ।
ಮನಕೆ ಸಂತಸವಾಯ್ತು ಮತ್ತದ ಪೇಳಿರೆನಲು ॥266॥

ಮಗನೆ ಊರೊಳಗೊಬ್ಬ ವಿಪ್ರನು ।

ಮಗನ ಮದುವೆಯ ಮಾಡಿಸುವನದ ।
ನಗಲಿಸುವ ವಿಘ್ನಗಳು ಬಂದುದು ದೈತ್ಯನಿಂದ ॥267॥

ಆತನಿಗೆ ದಿನಕೊಬ್ಬ ಮನುಜ ಮ ।
ಹಾತಿಶಯವಹ ಅನ್ನ ಶಾಕವು ।
ನೀತಿಯಲಿ ದಿನದಿನಕೆ ಕೊಡಬೇಕೆಂತೆ ಮಗನೆ ॥268॥

ವಸುಮತೀಸುರ ತನ್ನ ಕಟ್ಟಳೆ ।
ಯೆಸೆವ ದಿನ ಬರೆ ಚಿಂತಿಸುತ್ತಿರೆ ।
ಅಶನದಾಸೆಗೆ ನಿನ್ನ ಕೊಡುವೆನೆನುತ್ತ ಬಂದೆ ॥269॥

ರಾಗ ದೇಸಿ ಝಂಪೆತಾಳ

ಲೇಸ ಮಾಡಿದೆ ತಾಯೆ ನೀ ಸಲಹಿದೆ ಎನ್ನ ಉಪವಾಸವನು ಬಿಡಿಸಿದೆ ।
ಇನ್ನೇಸು ಧನ್ಯಳೋ ಎಂದು ॥270॥

ಚಕ್ಕುಲಿಯ ಕಜ್ಜಾಯಗಳನು ತಿಂಬಾಗಲು ।
ಗಾರಿಗೆಯ ಸಕ್ಕರೆಯ ಬೆರೆದು ಘತವೆರಸಿಕೊಂಬ ।
ಇಕ್ಕೆ ಸಂತಸದಿಂದನ್ನಗಳನುಂಬಾಗ ।
ನಕ್ಕಾನೋ ಎನ್ನ ಕಂದ ಹೇರಂಬ । ಲೇಸ ॥271॥

ವಚನ

ಇಂತೆಂದು ಭೀಮ ಪೇಳಲಾಗಿ ಧರ್ಮರಾಯ ಏನೆನುತಿದ್ದನೊ -

ರಾಗ ಗೌಳಪಂತು ಏಕತಾಳ

ಎಂಥ ಮಾತು ಪೇಳ್ದೆಯೆಂದು ಎನ್ನಬಹುದೇನಮ್ಮ ।
ಸಂತತಿಯೊಳಗತಿ ಸಣ್ಣ ಈ ಭೀಮ ।
ಅಂತಕನ ತೆರದಸುರರ ಅರೆದು ತಿಂಬನೆ ದೂರ ।
ಮುಂತಾರಿಗುಸುರುವೆ ಮೋಹದ ತಮ್ಮಾ ಏ ಭೀಮ ॥
ಪೋಗಬೇಡ । ನೀ ಪೋಗಬೇಡ ॥272॥

ಎಲ್ಲಿಯ ಬ್ರಾಹ್ಮಣ । ಎಲ್ಲಿಯ ಮದುವೆಯು ।
ಎಲ್ಲಿಯ ಸರಸವಲ್ಲೆ । ಸೊಲ್ಲ ಕೇಳುವರಿಲ್ಲ ಬಕಾಸುರನ ಕೊಂದಲ್ಲಿ ನಮಗೇನು ಫಲ
ಬಲ್ಲೆ ನೀ ಮಾತೆಲ್ಲ ಪೇಳಲೊಲ್ಲೆ ಪೋಗದಿರೋ ಭೀಮ ॥273॥

ವಚನ

ಇಂತೆಂದ ಮಾತಿಗೆ ಆ ಭೀಮ ಏನೆನುತಿದ್ದನು -

ಪಂಚಕ

ಇನ್ನು ಚಿಂತಿಸಬೇಡ ಅಸುರಗನ್ನವೀವ ಮೊದಲೆಯುಂಡು ।
ಚೆನ್ನಾಗಿಯವನ ಕೊಂದು ಬರುವೆ ಕೇಳೆನ್ನ ಮಾತನಗ್ರಜ ।
ನಿನ್ನದಯದಿಂದ ತಮ್ಮನ ಸಾಹಸವ ನೋಡಣ್ಣ ।
ಎನ್ನಲಾಶೀರ್ವಾದವಿತ್ತು ತನ್ನ ತಾಯ ಮೊಗವ ನೋಡಿ ।
ಇನ್ನು ಪೋಗೆಂದನಗ್ರಜ ॥274॥

ವಚನ

ಈ ತೆರದಿ ಅಗ್ರಜಾನುಜರೆಲ್ಲ ಸಮ್ಮತಂಬಡಿಸಿ ಆ ರಾತ್ರಿಯಲ್ಲಿ ಮಲಗಿರಲು । ಇತ್ತಲಾ ಬ್ರಾಹ್ಮಣನ ಮನೆಯಲ್ಲಿ ಪಾಕಶಾಲೆಗಳು ಹೇಗೆ ಒಪ್ಪುತ್ತಿದ್ದವೋ -

ರಾಗ ಕಾಂಭೋಜಿ ಏಕತಾಳ

ವಂತಕ ದಾಡಿಮ ಕದಳಿಗಳ ।
ಮುಂತೆಸೆದವು ಹಾಗಿಲ ಕಾಯಿಗಳ ।
ಸಂತಸದಿಂದ ರಚಿಸಿದರಾವಿಗಳ ।
ತಿಂಥಿಣಿ ಮೆರೆದವು ಶಾಕಗಳ ॥275॥

ಕರಜಿಕಾಯಿ ಚಕ್ಕುಲಿ ದೋಸೆಗಳ ।
ಥರ ಥರ ವಡೆ ಹೋಳಿಗೆಗಳ ।
ತರಗು ಗಾರಿಗೆಗಳನು ಮಾಡಿ ದೊಟ್ಟುವನು ।

ಹರುಷದಿ ನೋಡಿದ ಭೂಮಿಸುರನನ್ನು ॥276॥

ವಚನ

ಆ ವಾಸನೆ ಸಂತಸವಿಡಿದು ಏನೆನುತಿದ್ದನು -

ಕಾಂಭೋಜಿ ಝಂಪೆತಾಳ

ಎಂದಿಗೆ ಉದಯವಾಗುವುದೋ ।
ಏನಮಾಡುವುದಿಂದನ್ನ ಶಾಕಗಳಾಯಿತು ।
ಬೆಂದುದು ಚಕ್ಕುಲಿಯಾ ।
ವಗ್ಗರಣೆಯು ಭೋರೆನುತಿದೆ ಎನಗೊಂದ ತಂದೀವರಿಲ್ಲ ॥277॥

ಸಾಸುವೆಯ ಒಗ್ಗರಣೆ ಶಬುದ ।
ಬೇವುತಲಿದಕೋ ಬೀಸುತಿಹುದು ಧೂಮವು ।
ದೋಸೆಗಳು ಬೇವುತಿದೆ ದೋಣಿಯೊಳು ಅನ್ನಗಳ ।
ರಾಶಿಯೊಟ್ಟಿ ಬಹಳಾದುವಲ್ಲ ॥278॥

ವಚನ

ಹೀಗೆಂದು ಚಿಂತಿಸುವ ಭೀಮನು ಕಂಡು ಕುಂತಿಯೇನೆನುತಿದ್ದಳು -

ರಾಗ ಗೌಳಪಂತು ಏಕತಾಳ

ಏನು ಮಗನೇ ಕಂದ । ಮಾತನಾಡದೆ ।
ಯೇನುಳಿದಿದ್ದೆಯೋ ಭೀಮ ॥
ನೀನೇಕೆ ಮರುಳಾದೆ ನಾಳಿನ್ನುಣ್ಣಲು ಬಹುದು ।
ಭಾನು ಬರಲೆಂದಳು ಕುಂತಿ ॥279॥

ಉಣ್ಣಬಹುದು ಎಂಬ ಮಾತ ಕೇಳ್ದರೆ ತಾಯೆ ।
ತಣ್ಣಗಾಯಿತು ಎನ್ನ ಮನಸು ॥
ಎಣ್ಣೆಯೊಳಗೆ ಬೇವ ಕಜ್ಜಾಯ ಧ್ವನಿಯಿಂದ ।
ಹಣ್ಣೆಪುದೆನಗೆ ಸಂತಸವು ॥280॥

ಎಂದು ಪೇಳುವ ಸಮಯಕ್ಕೆ ತರಣಿಯು
ಬಂದು ತೋರಿತು ಪೂರ್ವಾಚಲದಿ ॥
ಮಂದಗಮನೆ ಕುಂತಿ ಅಂದು ಭೀಮನ ಕರ ।
ತಂದಳು ಆ ದ್ವಿಜನ ಮಂದಿರಕೆ ॥281॥

ಕುಂತಿಯು ಬ್ರಾಹ್ಮಣ ಸಹ ಬಂದು ಅನ್ನವ ।
ನಂತ ಕಜ್ಜಾಯವ ತರಿಸಿ ॥
ಮುಂತೆಸೆದಿಹ ಕೋಣನ ಬಂಡಿಗೋರಂತೆ ।
ನಿಂತು ತುಂಬಿಸಿದರು ಬೇಗ ॥282॥

ಒಂದು ಸಾಲಾಗಿ ಕಜ್ಜಾಯವ ತೂಗಿಸಿ ।
ಒಂದು ಸಾಲಿನೊಳನ್ನವಿರಿಸಿ ॥
ಒಂದು ಸಾಲಿನಲಿ ಹರುವೆಂು ತುಪ್ಪವ ।
ತಂದೊಟ್ಟಿದರು ಬಂಡಿಯೊಳಗೆ ॥283॥

ಇದು ಲವಣಗಳ ಶಾಕಗಳು ತೊವೆಯಿದು ।
ಇದು ಅನ್ನದ್ಹೆಡಿಗೆ ನೊಡಯ್ಯ ॥
ದಧಿ ಹಾಲು ತುಪ್ಪ ಕೇಳಿದು ಕಜ್ಜಾಯವು ।
ಮದಮುಖದವನೆ ನೋಡಯ್ಯ ॥284॥

ಕೇಳಯ್ಯ ಭೂಸುರ ಹೇಳುವೆ ನೀನೇಕೆ ।
ಕೂಳ್ಲ ನಾನುಂಬುದೇನು ॥
ಕೇಳದೆನ್ನಯ ಮಾತ ಖೂಳ ರಕ್ಕಸಗಿತ್ತ ।
ಮೇಲೇನ ಪೇಳ್ವೆನು ನಾನು ॥285॥

ಹುಟ್ಟಿದ ಮನುಜರ್ಗೆ ಮರಣವೆಂಬುದು ಸಿದ್ಧ ।
ಕೊಟ್ಟಳು ಮಾರಿ ರಕ್ಕಸಗೆ ॥
ನೆಟ್ಟನೆ ನಿನ್ನ ಕುಮಾರ ಬದುಕಿದನೇನಿನ್ನು ।
ಬಿಟ್ಟೆನ್ನ ಕಳುಹೆಂದ ಭೀಮ ॥286॥

ವಚನ

ಇಂತೆಂದ ಮಾತಂ ಕೇಳಿ ಬ್ರಾಹ್ಮಣ ಕುಂತಿಯೊಡನೆ ಏನೆನುತಿದ್ದನು -

ಕಂದ

ಹನ್ನೆರಡು ಖಂಡುಗದಕ್ಕಿಯ ।
ಅನ್ನವು ಶಾಕವು ತುಪ್ಪ ದಧಿ ಹರವಿಗಳನಂ ॥
ಮುನ್ನತವಿರಿಸಿದೆ ಕೇಳ್ ।
ನಿನ್ನವನಂ ಕಳುಹೆನಲಿವಳಿಂತೆಂದಳು ॥287॥

ಬಾ ಮಗನೆ ಅಸುರಗನ್ನವಂ ।
ನೇಮದಿಂ ಕೊಡುಯೆನಲು ಭೀಮನಡರಿದ ಬಂಡಿ ।
ಆ ಮಹಿಷದ್ವಯನ ಝಡಿಯಲು ।
ಗ್ರಾಮಂಗಳಂ ಕಳೆದು ನಡೆದನಾ ಕಾನನಕ್ಕೆ ॥288॥

ಪುರದೊಳಗಿರ್ದ ಧರಣಿ ।
ಸುರರೆಲ್ಲ ನೆರೆದು ಬಂದೀಕ್ಷಿಸೆ ಮತ್ತಾ ।
ಶ್ಚರಿಯವಂ ತಾಳ್ದರು ।
ಹರ ಹರ ಎನುತಾಗವರು ತಂತಮ್ಮ ಮನೆಗೈದಿದರ್ ॥289॥

ವಚನ

ಇತ್ತಲಾಗಿ ಭೀಮನು ಬಕನ ಬಳಿಗೈದಿ ಏನೆನುತಿದ್ದನು ಎಂದರೆ -

ರಾಗ ಘಂಟಾರವ ಅಷ್ಟತಾಳ

ಸಾರಿನ ಸೂರೆಯ ಕಂಡನು । ಅಲ್ಲಿ ।
ಮಾರುತಿ ಸವಿ ಸವಿದುಂಡನು ॥ ಸಾರಿನ ॥
ತುಪ್ಪದ ಕೊಡನೆತ್ತಿ ಕುಡಿದನು । ಇದಿ ।
ರಿಪ್ಪ ಶಾಕಾನ್ನವ ಹೊಡೆದುಂಡನು ॥
ಅಪ್ಪಾದ ಜಗಳಕ್ಕೆ ನಡೆದನು । ಅಣ್ಣ ।
ನಪ್ಪನ ರಥವನ್ನು ಹೊಡೆದನು ॥ ಸಾರಿನ ॥290॥

ಅಸುರನಿದ್ದಲ್ಲಿಗೆ ಹೋದನು । ಆತ ।
ಗಶನದ ತುತ್ತೊಂದ ತೂರಿದನು ॥
ಹಸನಾಗಿ ಮತ್ತಾತನುಂಡನು । ಸಂ ।
ತಸದಿ ರಕ್ಕಸನನ್ನು ಕರೆದನು ॥ ಸಾರಿನ – ||291||

ರಕ್ಕಸನಿದಿರೆದ್ದು ಬಂದನು । ಆಗ । ಫಕ್ಕನೆ ನೋಡುತ ನಿಂದನು ॥
ಮುಕ್ಕಣ್ಣ ಶಿವಬಲ್ಲನೆಂದನು । ಯು ।
ದ್ಧಕ್ಕೆ ಬಾರೆಂದು ಹೋರಿದನು ॥ ಸಾರಿ …. ||292||

ರಾಗ ಮಾರವಿ ಝಂಪೆತಾಳ

ಮಾರಿ ರಕ್ಕಸ ಬಂದು ಮಾರುತಿಯನು ಕಂಡು ।
ಭೋರೆಂದು ಮೊರೆವುತ್ತ ಭುಗಿಲೆಂದು ನಿಂದು ॥
ನೂರು ಬಾರಿ ಗುದ್ದಿದರೇನೆಂದರಿಯನು ।
ನೀರ್ಮಜ್ಜಿಗೆಯನುಂಬ ಸಂಭ್ರಮದಿ ॥293॥

ರಾಗ ಭೈರವಿ ಪಂಚಘಾತ ಮಟ್ಟೆ

ಉಂಬ ಸಮಯದಿ । ದೊಂಬಿ ಮಾಡಿದೆ ।
ನಂಬಲಾರೆ ನೀನು ಹಿ । ಡಿಂಬನಣ್ಣನೋ ॥294॥

ಎನುತ ಘ್ಂರರನೆ । ಎದ್ದು ತೇಗಿದ । ಧ್ವನಿಯ ಕೇಳಿ ।
ದಿಟ್ಟ ಬಕನು । ಕನಲಿ ರೋಷದಿ ॥295॥

ಬಂದು ಹಿಡಿದನು । ಕೂಗಿ ನುಡಿದನು ।
ಮಂದರಾದ್ರಿಯಂತೆ ಭೀಮ । ನಂದು ಹೊಡೆದನು ॥296॥

ಎಲವೊ ಮನುಜನೆ । ನಿಲ್ಲೆನುತ್ತಲೆ ।

ಮಲಯಚಲದ ವೋಲು ನಿಂದ ಖಳಕುಲಾಗ್ರಣಿ ||297||

ಗಿರಿ ಗಿರಿ ಗಳು ಮಲೆವ ತೆರದೊಳು |
ದುರುಳ ಬಕಾಸುರ ಭೀಮ ಭರದಿ ಕಾದಲು ||298||

ಮಲ್ಲಯುದ್ಧದಿ | ಮಡಿದರಲ್ಲಿವ |
ಯೆನುತ ಭೀಮನೊಂದು | ಮರನ ಮುರಿದನು ||299||

ನುಸಿಯ ಬಡಿಯಲು | ಅಸುರಗೊಂಡೆಯ |
ವಸುಧೆಯೊಳಗೆ ಬಿದ್ದು ದನುಜ ಅಸುವನಳಿದನು ||300||

ಅವನ ಅಂಗವ | ಇವನು ಕಂಡನು |
ತವಕದಿಂದ ತರಲು ಕಂಡರವನಿಯಮರರು ||301||

ವಚನ

ಈ ರೀತಿಯಲ್ಲಿ ಬಕಾಸುರನ ಸಂಹರಿಸಿ ಅವನ ಹೆಣವಂ ಆ ಬಂಡಿಗಂ ಕಟ್ಟಿಕೊಂಡು ಅಗ್ರಹಾರಕ್ಕೆ ಬರುವಾಗ ಸಕಲ ಬ್ರಾಹ್ಮಣರು ಏನೆನುತಿದ್ದರೋ -

ರಾಗ ಗೌಳಪಂತು ಅಷ್ಟತಾಳ

ಊರಿಗೆ ಬರುವ ಮಾರಿಯ ನೋಡಿರೊ |
ಏರಿ ಬಂಡಿಯ ಮೇಲೆ ಹೋರಿಯ ಹೊಡೆವುತ್ತ ||
ಅಲ್ಲಿಗೈದಿದ ನರ ಎಲ್ಲಿಗ್ಹೋದನೋ ಕಾಣೆ |
ಖುಲ್ಲ ಬಕಾಸುರ ಕೋಪದೊಳು |
ಎಲ್ಲರ ತಿನಬೇಕೆಂಬ ಯತ್ನದೊಳೀಗ ನಿಲ್ಲದೆ ಬರುವ ಉಲ್ಲಾಸದಿಂದ ||302||

ವಚನ

ಇಂತೆಂದು ಸಕಲ ಬ್ರಾಹ್ಮಣರು ತಮ್ಮ ತಮ್ಮ ಮನೆಗೈದಿ ಸರಕ ಸಂವರಿಸುತ್ತಿರಲು ಅವರವರೊಳಗೆ ಏನೆನುತಿದ್ದರೂ -

ರಾಗ ಕಾಂಭೋಜಿ ಏಕತಾಳ

ಎಂದಿನ ಹಾಗಲ್ಲ ಇವನಾರಯ್ಯೋ | ನಮ್ಮ |
ತಿಂಬೆನೆಂದೆನುತ್ತ ಬಹನಾರಯ್ಯ ||
ಅನ್ನ ಮನುಜ ಮಹಿಷರನ್ನು ತಿಂದು | ಬಂಡಿ |
ಯ ನೂರದೆಯಲ್ಲ ಕ್ಷಣ ಬಂದುದೆಲ್ಲಿಂದ ||
ಕಂಡ ಜನವಿನಿತು ಚೋದ್ಯವೆಂದು | ಅಸು |
ರನ್ನೆ ಬಹನೆಂದು ಚಿಂತಿಸುತ್ತ ನಿಂದು ||303||

ಇಲ್ಲಿಂದ ಹೋದ ಮನುಜನೆಲ್ಲಿ ಗೈದಿದ | ಅನ್ನ |
ವೆಲ್ಲವ ತಾನೆ ಉಂಡನೊ ಖುಲ್ಲಗೀಯದೆ ||
ಎಲ್ಲಾರ ನುಂಗುವೆನೆಂದು ರೋಷದಿಂದಲಿ | ಬಂದ |
ನಲ್ಲೋ ಉಂಬ ಸೊಲ್ಲ ಕೇಳುತ್ತ ನುಡಿದ ||304||

ಹೋದ ಮನುಜನೆ ಾಣಿರಣ್ಣಗಳಿರ | ಇಂದೀ |
ದುರಾತ್ಮನ ಕೊಂದೆ ಅಣ್ಣಗಳಿರ ||
ಆದರೀಕ್ಷಿಸೆಂದನಾ ಕಳೇವರವ |
ಬಾಗಿಲೊಳ್ಮೆರಸುತ್ತ ಭೀಮ ಬಂದ ||305||

ವಚನ

ಇಂತೆಂದು ಪೇಳಿದ ಭೀಮನಂ ಕಂಡು ಬ್ರಾಹ್ಮಣರೆಲ್ಲ ಧೈರ್ಯದಿಂ ಬಂದು ಆಶೀರ್ವಾದವಂ ಮಾಡಿ ನಿನ್ನಿಂದ ಅಗ್ರಹಾರಕ್ಕೆ ವಿಪತ್ತು ಪರಿಹರಿಸಿತು ಎಂದು | ಭೀಮ ಬಂದು ಧರ್ಮಜ ಮುಂತಾದವರು ಕಾಣಿಸಿಕೊಂಡು ಕುಂತಿಗಭಿನಮಿಸಿ ಸಂತೋಷದಿಂದಿರುವ ಸಮಯಾಂತರದಲ್ಲಿ ಒಬ್ಬ ವಿಪ್ರೋತ್ತಮನಂ ಕಂಡು ಧರ್ಮಜ ಏನೆನುತ್ತಿದ್ದನು -

ರಾಗ ಸೌರಾಷ್ಟ್ರ ತ್ರಿವುಡೆತಾಳ

ಎತ್ತಲಿಂದೈತಂದೆ ಭೂಸುರ |
ಇತ್ತಲೆಲ್ಲಿಗೆ ಗಮನವೆನೆವಿ |
ಪ್ರೋತ್ತಮನು ಧರ್ಮಜಗೆ ಬಳಿಕುತ್ತರಿಸಿದ ||306||

ಈಸುದಿನ ಹಸ್ತಿನಪುರದೊಳು
ವಾಸವಾಗಿ ಇದ್ದೆನಯ್ಯ |
ಮೋಸ ಹೋದರು ಪಾಂಡವರು ಆ ದೇಶದೊಳಗೆ ||307||

ಧಾರುಣಿಪ ಧರ್ಮಜನ ಸಂಗಡ ।
ವರ ಸುಧರ್ಮಗಳೆಲ್ಲ ಹೋದವು ।
ಪುರದೊಳಗೆಯಿರಬಾರದೆಂದಾ ಭರದಿ ಬಂದೆ ॥308॥

ಎಂದ ನುಡಿಯನು ಕೇಳಿ ಯಮಜನು ।
ತಂದನು ನಯನೋದಕವನು ।
ಮಡಿದರು ಕುಂತಿನಂದನರೆನುತಲೆ ಸುಯಿದಿಂದು ಬಲು ಶೋಕಿಸಿದನು ।
ಭೂಸುರನಿದಿರಿನೊಳು ॥309॥

ರಾಗ ದ್ವಿಪದಿ ಝಂಪೆತಾಳ

ಅವರ ಸುದ್ದಿಯು ಸಾಕು ಅವನಿ ಸುರ ನೀನು ।
ತವಕದಿಂದೆತ್ತಲೈದುತ್ತಲಿಹೆ ನಾನು ॥310॥

ತಿಳಿವುದಾದರೆ ತಿಳಿವೆನೆನ್ನಲಾಗ ।
ಇಳೆಯ ಸುರ ಧರ್ಮಜಗೆ ಪೇಳುತಿಹ ಬೇಗ ॥311॥

ಪಾಂಚಾಲ ಭೂಪಾಲ ಪುತ್ರಿಯನು ಪಡೆದು ।
ತಾ ಚಕ್ರಧರ ಮುಖ್ಯರಾಯರನು ಕರೆದು ॥312॥

ಮದುವೆಯನು ಮಾಡುವನು ಮಗಳ ಸಂಭ್ರಮದಿ ।
ಬುಧರಿಷ್ಟವನೀವ ಭೂಮಿಪನು ಮುದದಿ ॥313॥

ಅದನರಿತು ದಕ್ಷಿಣೆಯ ಆಶೆಯೊಳು ಬಂದೆ ।
ಚದುರ ತಾಂ ಪೋಗುವೆನು ಕೇಳು ದಯಸಿಂಧು ॥314॥

ವಚನ

ಇಂತೆಂದು ಬ್ರಾಹ್ಮಣ ಪೇಳಲಾಗಿ ಆ ಪಟ್ಟಣದ ಬ್ರಾಹ್ಮಣರು ಏನೆನುತಿದ್ದರು -

ರಾಗ ಕಾಂಭೋಜಿ ಏಕತಾಳ

ಹಿರಿಯ ಬ್ರಾಹ್ಮಣ ಸಿಕ್ಕಿದ ನಮಗಿಂದು ।
ಗುರುಗಳುಪಾಧ್ಯರೆ ಹರನ ಪೂಜಿಸಿ ।
ವರ ಶಿಷ್ಯರನ್ನು ಈಗ ಕರೆದು ಬನ್ನಿ ಪೋಗುವ ॥ ಹಿರಿಯ ॥315॥

ಎಲ್ಲ ವಿಪ್ರರು ಬನ್ನಿರೆಲ್ಲ ಭಟ್ಟರು ಬನ್ನಿರೆಲ್ಲ ॥
ಎಲ್ಲ ದೀಕ್ಷಿತರೈದಿ ಸೊಲ್ಲನವಧರಿಸಿ ॥ ಹಿರಿಯ ॥316॥

ನಿತ್ಯಕರ್ಮವ ಮಾಡುತ್ತ ಶ್ರೀಕೃಷ್ಣನನ್ನು ।
ಸ್ತುತ್ಯವ ರಚಿಸಿ ನೀವೆತ್ತ ಪೋಗದೆ ಬನ್ನಿರೋ । ಹಿರಿಯ …. ||317||

ನಿನ್ನ ಪಾಂಚಾಲ ಕನ್ನೆಯ ಮದುವೆಗೆ ।
ಹೊನ್ನು ದಕ್ಷಿಣೆ ಬಹವಿನ್ನು ಸಂದೇಹ ಬೇಡ ॥ ಹಿರಿಯ …. ||318||

ವಚನ

ಇಂತೆನಲು ಬ್ರಾಹ್ಮಣರು ವಿಪ್ರೋತ್ತಮನೊಡನೆ ಪೋಗುತ್ತಿರಲಾ । ಪಾಂಡವರು ಬರುತ್ತಿರಲಾಗಿ । ಮಾರ್ಗದಲ್ಲಿ ನಿಮಿತ್ತಗಳಾದವದೆಂತೆನೆ -

ರಾಗ ಸೌರಾಷ್ಟ್ರ ತ್ರಿವುಡೆತಾಳ

ಮುಂದೆ ಧರ್ಮಜ ನಡೆಯಲಾತನ ।
ಹಿಂದೆ ಭೀಮನು ನಗುತ ಬರುತಿರೆ ।
ಇಂದ್ರನಂದನ ಯಮಳರೈತರುತಿರ್ದರಾಗ ॥319॥

ಕನ್ನೆಯರ ಕರದೊಳಗೆ ಕಲಶವ ।
ಕನ್ನೆಯರು ಪಿಡಿದಿದಿರು ಬಂದರು ಸು ।
ಪರ್ಣನೆಡದಿಂ ಬಲಕೆ ಸುಳಿಯಲು ಮಾರ್ಗದೊಳಗೆ ॥320॥

ಏನಿದಚ್ಚರಿ ನಮ್ಮೊಡನೆ ಆ ।
ಮಾನಿನಿಯ ವರನಿಲ್ಲಿ ಇರುವನೊ ।
ಈ ನಿಮಿತ್ತವಿದತಿ ಶುಭಗಳೆಂದವನಿಸುರರು ॥321॥

ಇಂತು ಮಾತಾಡುತ್ತಲವರೋ
ರಂತೆ ಬರುತಿರೆ ಕತ್ತಲೆಯ ದಳ ।
ವಂತೆ ದಕ್ಷಿಣಕೈದಲಾದೆಸದೆಸೆಯೊಳಲ್ಲಿ ॥322॥

ವಚನ

ಇಂತೆಂದು ತಮ್ಮೊಳಗೆ ಆಲೋಚನೆಯಂ ಮಾಡುತ್ತ ಕತ್ತಲೆಯಲ್ಲಿ ಬೀಸುಗೊಳ್ಳಿಯ ಬೆಳಕಿನಲ್ಲಿ ಬರುತ್ತಿರಲಾಗಿ । ಅಂಗಾರವರ್ಮನ ಕೂಡೆ ಹೆಣಗಿದ ಬಗೆಯದೆಂತೆನೆ -

ರಾಗ ಸೌರಾಷ್ಟ್ರ ಏಕತಾಳ

ಗಂಧರ್ವನೋರ್ವನು ಬಂದು ।
ಭೂತಳದೊಳು ಎಂದೆಂದು ಜಲಕ್ರೀಡೆಯಾಡಿ ಹಿಂದೆ ಹೋಗುವನಂತೆ ।
ಅಂದು ಪಾಂಡವರೆಲ್ಲವೊಂದಾಗಿ ಬರಲು ನೋಡಿದನು ॥323॥

ನಾರಿಗಳೆಲ್ಲರು ಸೀರೆಗಳನು ಬಿಟ್ಟಾ ।
ನೀರೊಳಗಿರುವ ವೇಳ್ಯದಲ್ಲಿ ।
ಹಾರುವ ನೀನಿಂದು ರಾತ್ರಿಯೊಳು ಬಂದ ಕಾರಣವೇನೆಂದು ಎಸೆದ ॥324॥

ಅಸಮ ಸಾಹಸಿ ಪಾರ್ಥ ಬಹ ಕಣೆಗಳ ಕಂಡು ।
ಬೀಸುಗೊಳ್ಳಿಯ ಮಂತ್ರಿಸಿ ಬಿಟ್ಟ ॥325॥

ನೀರ ಹೊಕ್ಕರೆ ಬಿಡದೆ ಹೋರಿತಾ ಬಾಣವು ।
ಹಾರಿದ ಗಗನದ ಮಾರ್ಗದೊಳು ॥ ಸೇರಿತಾ ದಾರಿಯ ಕಟ್ಟಲು ಭರದಿಂದ ।
ನಾರಿಯರೊಡನೆ ಬಂದಾ ನೀರ ಕುಡಿಯಲು ಬಾಯಾರಿ ಬೊಬ್ಬಿಡುತ್ತೈತಂದು ॥326॥

ಯಾರಯ್ಯ ನೀವೀಗ ಕಾರಣ ಪುರುಷರು । ಬಾರಿ ಬಾರಿಗೆ ನಮೊ ಎನುತ ।
ಶರಣೆಂದ ಸುರನನು । ನೆಗಹಿ ನೀನಾವ ಪುರುಷನೆಂದು ಯಮ ಸೂನು ॥327॥

ಗುರುತ ಹೇಳುವೆ ನಿಮ್ಮ ಶರವೆನ್ನ ಸುಡುತಿದೆ । ಪರಿಹರಿಸದನೆಂದನು ।
ಪರಿಹರಿಸುವಡೆನ್ನ ಶರವಲ್ಲ ಹಿಂ । ದಿರುವ ಭೂಸುರನ ಮಾಯಕವು ॥328॥

ಅರುಹೆನೆ ಭೂಸುರನ ಚರಣಕ್ಕೆ ನಮಿಸುತ್ತ ।
ಕರುಣದಿ ಕಾಯ ಬೇಕೆಂದ ॥329॥

ಎಂದ ಸುರನ ಕಂಡು ಇಂದ್ರಜ ನಿಲಿಸಿ । ಎಂದನು ಅಂಗಾರವರ್ಮ ॥
ಬಂದ ಪರಿಯೇನು ಮುಂದೆ ಪೋಗುವುದೆತ್ತ ॥
ಸೌಂದರ್ಯಕರು ನೀವಾರು ಎಂದೆನಲು ಪಾಂಡವರೆಲ್ಲರು ನಾವು ॥330॥

ಘನವಾದ ದ್ರುಪದನ ಪಟ್ಟಣಕ್ಕೆ ।
ಜನಪನ ಕುವರಿಯ ಮದುವೆಗೆ ಪೋಪೆವು ।
ಮುನಿಸು ಬೇಡೆನುತಲಪ್ಪಿದನು ॥331॥

ವಚನ

ಆಗಲಾ ಅರ್ಜುನನು ನೀನಾರೆಂದು ಕೇಳಲು ಏನೆನುತಿದ್ದನು -

ರಾಗ ದ್ವಿಪದಿ ಝಂಪೆತಾಳ

ಅಂಗಾರವರ್ಮನಾ ಅಮರಲೋಕದೊಳು ।
ಅಂಗನೆಯಯರೆಲ್ಲರಂ ಕರೆತಂದು ಜಲದಿ ॥332॥

ಆಡುತಿಹ ಸಮಯಕ್ಕೆ ನಿಮ್ಮನ್ನು ಕಂಡೆ ।
ಮೂಢತನದೊಳು ಒಂದು ಶರವ ತಕ್ಕೊಂಡೆ ॥333॥

ಅದರಿಂದ ಬಂದ ಅಪಮತ್ಯುವನ್ನೆಲ್ಲ ।
ಮುದದಿಂದ ನೀನು ಪರಿಹರಿಸಿರ್ಪೆಯಲ್ಲ ॥334॥

ಎಂದು ರತ್ನಗಳ ಕಾಣಿಕೆಯನೀಯೆ ।
ಅಂದು ಧರ್ಮಜ ಕಂಡು ನುಡಿದನಿಂತೆಂದು ॥335॥

ನಿಮ್ಮ ರತ್ನಗಳೆಲ್ಲ ಇಲ್ಲಿರಲಿ ತಾಳು ।
ಇನ್ನೊಂದು ಸಮಯಕ್ಕೆ ತರಿಸುವೆನು ಕೇಳು ॥336॥

ಎಂದು ಧರ್ಜಜ ಪೇಳೆ ಅತಿ ಹರುಷದಿಂದ |
ಗಂಧರ್ವ ತೆರಳಿದನು ಗಳಿಗೆಗಲ್ಲಿಂದ ||337||

ಮುಂದೆ ಧೌಮ್ಯನ ಕೂಡಿಕೊಂಡು ದ್ರೌಪದಿಯ |
ತಂದೆಯಾಳುವ ಪುರವ ಪೊಕ್ಕರಾ ಕ್ಷಿತಿಯ ||338||

ವಂದಾಕರ ಸರಣಿ ವಾರಂತೆಯಿರಲು |
ಇಂದು ಮುಖಿಯರು ಮಂಗಲಾರತಿಯ ತರಲು ||339||

ವಚನ

ಇಂತು ಮಂಗಳ ಘೋಷದಿಂದ ಬ್ರಾಹ್ಮಣರ ಸಂಗಡ ಪಾಂಡವರು ಪಟ್ಟಣಕ್ಕೆ ಬಂದು ಇರುತ್ತಿರಲಾ ಪಟ್ಟಣದಲ್ಲಿ ಏನು ಮಾಡುತ್ತಿದ್ದರೋ – ಮಂಗಳಂ ಜಯ ಮಂಗಳಂ ||

ರಾಗ ದ್ವಿಪದಿ ಝಂಪೆತಾಳ

ದ್ರುಪದ ದಷ್ಟದ್ಯುಮ್ನ ದ್ರೌಪದಿಯ ಪಡೆದು |
ನಪರಾಜನೆಂದೆನಿಸಿ ಅತಿ ಕೀರ್ತಿಪಡೆದು ||340||

ವರಕುಮಾರಿಯ ವಿವಹದುತ್ಸವಕ್ಕೆಂದು |
ಪುರವ ಶಂಗರಿಸಲ್ಕೆ ಮಂತ್ರಿಗೆನಲೆಂದು ||341||

ಕೇಳಿದಾಕ್ಷಣವೆ ಮೇಲ್ಗಟ್ಟು ತೋರಣವ |
ಸಾಲಾಗಿ ರಚಿಸಿದರು ಪಟ್ಟಣದೊಳಿರುವ ||342||

ಮನೆ ಮನೆಗೆ ಬಣ್ಣಗಳ ರಚಿಸಿದರು ನಿತ್ಯ |
ಕನಕ ಬೊಂಬೆಗಳ ನಿರ್ಮಿಸಿದನಮಾತ್ಯ ||343||

ಕೋಟಿ ಶಕಟಗಳ ಬೀದಿಯಲಿ ನಿಲಿಸಿದನು |
ನೀಟಾಗಿ ಮೆರೆವ ಭೇರಿಗಳ ಹೊಯ್ಸಿದನು ||344||

ರಾಗ ಸೌರಾಷ್ಟ್ರ ತ್ರಿವುಡೆತಾಳ

ಕುಂದಣದ ರೂಪೊಂದು ದೆಸೆಯಲಿ |
ಅಂದವಡೆದ ಕವಾಟದಲಿ ಪೂರ್ಣೇಂದುವನು |
ತಂದಿರಿಸಿದರೊ ಎನೆ ಮೆರೆದುದಾ ನಗರ ||345||

ಪಂಚಯೋಜನದಗಲದಲಿ |
ಅತಿಕಾಂಚನದ ಪೋಲ್ಗೆಲನ ರಚಿಸಲು |
ಪಂಚ ಸಾಸಿರ ನಪರ ಗಹವನು ಪಾಂಚ ವಿರಚಿಸಿದನು ||346||

ವಚನ

ಈ ಪ್ರಕಾರದಲ್ಲಿ ಪಾಂಚಾಲ ಪಟ್ಟಣವ ಶಂಗರಿಸಿ ಛಪ್ಪನ್ನ ದೇಶದ ಭೂಪರಿಗೆ ಲೇಖನವ ಬರೆಸಿ ಕಳುಹುತ್ತಿರ್ದನದಂತೆನೆ -

ರಾಗ ದ್ವಿಪದಿ ಝಂಪೆತಾಳ

ಕರುಣ ಸಾಗರನು ಕರಣಿಕರ ಕರೆಸಿದನು |
ತರುಣಿ ದ್ರೌಪದಿಯ ಸ್ವಯಂವರದ ವಸಗೆಯನು ||347||

ಬರೆಸಿದನು ರಾಯಸವ ದೇಶ ಭೂಪರಿಗೆ |
ದೇಸಿನೊಕ್ಕಣೆಯಿಂದ ಬಿರುದಿನೊಕ್ಕಣೆಗೆ ||348||

ಕೇಳಿದಾಕ್ಷಣ ಕರಣಿಕನು ಹಿಗ್ಗಿದನು |
ತಾಳಿಸಿದ ವಾಲೆಯನು ಕಂಠವನು ಪಿಡಿದು ||349||

ಸ್ವಸ್ತಿ ಶ್ರೀಮತು ಸಕಲ ಭೂಪರಿಗೆ |
ಉಕ್ಕಿ ಹರುಷವನು ಮಾಡುವೆನು ಈ ಧರೆಗೆ ||350||

ಪಾಂಚಾಲ ಭೂಪ ಪಾರ್ವತಿಯಂತೆ ಮೆರೆವ |
ವಂಚನೆಗಳಿಲ್ಲದೆ ಹೋಗಿ ಕರಸುವೆನು ದೊರೆಯ ||351||

ನಾಳೆ ಎನ್ನಾಮಗಳನೀವ ವಸಗೆಗಳ |

ತಾಳಲಾಗದು ಎರಡು ಮನವ ಹರುಷಗಳ ||352||

ಗೋರಾಷ್ಟ್ರ ಗೋಡ ಮುಖ ಕಾಂಚಿ ಬರ್ಬರ |
ಮಾರಾಷ್ಟ್ರ ಬದ್ದಿ ರಾಯರಿಗೆ ವಂದಿಸಿದ ||353||

ರಿಂಗ ಕಾಂಭೋಜ ಮಾಳವೆಯ ನಪೋತ್ತಮಗೆ |
ಅಂಗ ದೇಶದ ನಪಗೆ ಕೌರವೇಶ್ವರಗೆ ||354||

ವಂದನಂ ಬಿನ್ನಪವಿದೆಲ್ಲಮಂ ತಂದು |
ಇಂದು ಮುಖಿ ದ್ರೌಪದಿಯ ಮದುವೆಗಂ ಬಂದು ||355||

ತೆರಳಬೇಕೆಂದು ಲಿಖಿತವನು ಬರೆಸಿದನು |
ಚರರು ಕೊಂಡೊಯ್ಯಲಾಕ್ಷಣದಿ ಓಲೆಯನು ||356||

ಬಂದರಾ ಛಪ್ಪನ್ನ ನಪ ಕುಲೋತ್ತಮರು |
ಚಂದದಿಂದಿರ್ಗೊಂಡು ಮನ್ನಿಸಿದನವರ ||357||

ವಚನ

ಈ ರೀತಿಯಿಂದ ಬಂದ ರಾಯರನ್ನು ಏನೆಂದುಚರಿಸುತ್ತಿದ್ದನು -

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇತ್ತ ಮಾಳವನತ್ತ ಗೌಳವ | ನೊತ್ತಿನಲಿ ಮಲಯಾಳನು |
ಸುತ್ತಣರಸರ ಪುತ್ಥಳಿಯ ಬೊಂಬೆಯೊಳೊತ್ತಿ ಸಾರಿಸವೆಂದನೂ |
ದ್ರುಪದ ಭೂಪಾಲ ||358||

ಅಂಗನಪ ಗುರ್ಜರದ ರಾಯರೆ | ಅಂಗದೇಶದ ಅರಸರೆ |
ಮಂಗಳವೆ ಮಾಳವರೆ ಸುಭಟೋತ್ತುಂಗ ಮಾಗಧ ಕ್ಷೇಮವೆ |
ಎನುತಲಾಗ ||359||

ವನದಿ ತೊಳಲುವ ಮುನಿಸಮೂಹವು | ವನಜ ಮುಖಿಯರ ಸಂಗವು |
ನಿನಗೆ ಸಾಲದೆ ಕೃಷ್ಣ ಹಲಧರ ಘನದಿ ಬಳಲುತ ಬಂದಿರೈ ||360||

ವನಜಲೋಚನ ವಾರಿಜೋದ್ಭವ | ಜನಕ ಸುರಮುನಿ ವಂದಿತ |
ಮುನಿ ಮನೋಹರ ಮಾಧವಾರ್ಚಿತ | ಘನ ಕಪಾಳು ನಮೋ ನಮೋ |
ದ್ರುಪದ ಭೂಪಾಲ ||361||

ವಚನ

ಇಂತೆಂದು ಅರಮನೆಯ ವಳಗಿಂದ ಬಂದು ದ್ರೌಪದಿಯ ಶಂಗಾರವ ಮಾಡೆನಲು ನಾರಿಯರು ಶಂಗಾರ ಮಾಡಿದರದೆಂತೆನೆ -

ರಾಗ ಮಾರವಿ ಝುಂಪೆತಾಳ

ಪನ್ನೀರ ಪಂಕಜಾಕ್ಷಿಗೆ ಜಳಕವ ರಚಿಸಿ |
ಚೆನ್ನಗಳ ರಚಿಸಿದರು ಚದುರೆ ನಾರಿಯರು ||362||

ನವದುಕೂಲವನುಡಿಸಿ ನವ್ಯ ತಿಲಕವ ರಚಿಸಿ |
ಯುವತಿ ಪಾಂಚಾಲೆ ನೀ ಬಾರೆಂದರವರು ||363||

ಏನೆ ಮಾನಿನಿ ರನ್ನೆ ಏನೆ ಸೊಬಗಿನ ಸೋನೆ |
ನೀನೇಕೆ ನಾಚುವೆಯೆ ನೋಡು ನಲ್ಲರನು ||364||

ಇನಿತು ದಿನ ಪರಿಯಂತ ನಿನ್ನ ಕೂಡಾಡಿದೆವು |
ಘನ ಪ್ರಾಯ ನಿನಗಾಯಿತು ನಡೆ ನಲ್ಲನೆಡೆಗೆ ||365||

ವಚನ

ಇಂತೆಂದು ದ್ರೌಪದಿಯ ಶಂಗರಿಸಿ ದ್ರೌಪದಿಯ ಪಲ್ಲಕ್ಕಿಯ ಮೇಲಕ್ಕೆ ಧಷ್ಟದ್ಯುಮ್ನನು ನಪರನ್ನು ತೋರಿಸುವನದೆಂತೆನೆ -

ರಾಗ ಸೌರಾಷ್ಟ್ರ ಅಷ್ಟತಾಳ

ಛಪ್ಪನ್ನ ದೇಶದ ರಾಯರ ಪಂಙ್ತೆಯ ನೋಡೆ ತಂಗಿ |

ಮನಬಪ್ಪರನ್ನು ಮಾಜದೆ ಪೇಳು ಎನ್ನೊಳು ನೋಡೆ ತಂಗಿ ||366||

ಈತ ಮಾಳವ ಪಾಂಡ್ಯನಾತ ಗೌಳವರಾಯ ನೋಡೆ ತಂಗಿ |
ನೂತನದವನಂಗ ವಂಗ ದೇಶದ ನಪನೋಡೆ ತಂಗಿ ||367||

ಭೂತಳಕರಸನು ಬರ್ಬರದರಸನು ನೋಡೆ ತಂಗಿ |
ಸೋತವನಲ್ಲ ಸಂಗರದಿ ಕಾಳಿಂಗನ ನೋಡೆ ತಂಗಿ ||368||

ಗೋರಾಷ್ಟ್ರ ಗೋಡ ಮುಖದ ಮಹರಾಯರ ನೋಡೆ ತಂಗಿ |
ಮಾರಾಷ್ಟ್ರವಡ್ಡಿಯ ಕಾಂಬೋಜದರಸರ ನೋಡೆ ತಂಗಿ ||369||

ಸೌರಾಷ್ಟ್ರ ಮಲಯಾಳ ಕೊಟ್ಟಯ ರಾಯರ ನೋಡೆ ತಂಗಿ |
ಮಾರಾಷ್ಟ್ರ ಬರ್ಬರ ಹಮ್ಮೀರದರಸರ ನೋಡೆ ತಂಗಿ ||370||

ನಿಗಮ ಗೋಚರ ಕೃಷ್ಣ ಬಲರಾಮ ಸ್ವಾಮಿಯ ನೋಡೆ ತಂಗಿ |
ಸುಗುಣ ಸುಯೋಧನ ಸೂರ್ಯಾತ್ಮಜ ಕರ್ಣನ ನೋಡೆ ತಂಗಿ ||371||

ಜಗದೇಕವೀರ ಜೋನಗದೇಶದರಸನ ನೋಡೆ ತಂಗಿ |
ಹಗಲರಸನು ಈ ಹಮ್ಮೀರದರಸನು ನೋಡೆ ತಂಗಿ ||372||

ವಚನ

ಇಂತೆಂದು ಧಷ್ಟದ್ಯುಮ್ನ ದ್ರೌಪದಿಗೆ ನಪರಂ ತೋರಿಸಲು ಕಂಡು ಕರ್ಣನ ಮನಃಪೂರ್ವಕದಿ ನೋಡಿ ಕೃಷ್ಣಗೆ ನಮಸ್ಕರಿಸಿ ಧಾರಾಮಂಟಕ್ಕೆ ಬಂದರದೆಂತೆನೆ -

ರಾಗ ದ್ವಿಪದಿ ಝಂಪೆತಾಳ

ಈ ಮಗಳು ಎನಗೇಕೆ ಪುಟ್ಟಿದಳೊ ಎಂದು |
ಭೂಮಿಯೊಳು ಮೂರ್ಛೆಯಿಂ ಬಿದ್ದವನಂದು ||373||

ಮತ್ತೆ ಚೇತರಿಸಿ ಮತ್ಸ್ಯದ ರೂಪ ಬರಸಿ |
ಕತ್ತಿ ವಾಸನನಟ್ಟ ಹಾಸದೊಳಗಿರಿಸಿ ||374||

ಗಂಧಾಕ್ಷತೆಗಳಿಂದಲಂಕರಿಸಿ ಬಂದು ನಿಂದು |
ಇಂದುಧರ ಭಾರಿ ಧನುವೆತ್ತ್ನೀರವೆಂದು ||375||

ಮತ್ಸ್ಯಲಾಂಛನವ ನೀರೊಳಗೆ ನೋಡುತ |
ಉತ್ಸಾಹದಿಂದೆಸೆವ ನಪಗೆಯೆನ್ನುತ್ತ ||376||

ಸಾರಿ ಸರ್ವರಿಗೆ ಧನುವೆತ್ತಿರೈ ಯೆನುತ |
ಧೀರ ಪಾಂಚಾಲ ಪೇಳಲು ಮಗಧ ನಗುತ ||377||

ಬೇಗದಿಂದೈತಂದ ಧನುವಿದ್ದ ಬಳಿಗೆ |
ನಾಗಭೂಷಣಗೆ ವಂದಿಸುತ್ತಲಾಗಳಿಗೆ ||378||

ಮುರಿವೆ ಯಂತ್ರವನೆಂದು ಬರಲು ಮದದೊಳಗೆ |
ಧರಣಿಯಿಂದಗಲದಿರೆ ರುಧಿರಾಗ ಚೆಲ್ಲೆ ||379||

ಗಂಡು ಹಿಮ್ಮೆಟಿದನು ಮಗಧ ಭೂಪಾಲ |
ತಂಡ ತಂಡದಿ ತೆರಳಿತವನಿಪರ ಜಾಲ ||380||

ಮನುಮಥಾರಿಯ ಬಿಲ್ಲ ನಿಂದು ನೋಡಿದನು |
ಧನುವಿಗೆ ನಮೋ ನಮೋ ಎಂದು ಸಾರಿದನು ||381||

ತರುಣಿಯರು ಕರಪೊದು ನಗುತಲಿರುವಾಗ |
ದುರುಳ ದುರ್ಯೋಧನನು ಬಂದು ಶಿರವೆರಗೆ ಬೇಗ ||382||

ಹಿಂದೆ ನಡೆದರೆ ಕಂಡು ಕರ್ಣ ಮಾರಾಂತ |
ಒಂದೆರಡು ಕ್ಷಣಮಾತ್ರ ಧನುವಿಡಿದು ನಿಂತ ||383||

ಸಾಗದಿರೆ ಕಂಡು ಒದಗಿದನು ಶಿಶುಪಾಲ |
ಮೂಗಿನಲಿ ಬೆರಳಿಟ್ಟು ಪೋಗೆ ಸ್ಮರಪಾಲ ||384||

ನಡೆದು ಬರುತಿರೆ ಕಂಡು ನಂದನಂದನನು |

ತಡೆದು ಹಿಡಿದನು ಕರವ ತನ್ನ ಅಗ್ರಜನ ||385||

ಕುಂತಿಯಾತ್ಮಜರು ನಿನಗೇನಹರು ಎಂದು |
ಅವರಕಾಂತೆ ನಮಗನುಜೆಯೆನೆ ಕೃಷ್ಣ ರಾಮೆಂದೂ ||386||

ಉರಿಮನೆಯೊಳಳಿದವರ ಸುದ್ದಿಯನು ಪೇಳ್ವೆ |
ಕರಗಳೆರಡನು ಮುಗಿದು ಶಿರವೆರಗಿನಿಂದು ||387||

ಎನಲು ಬಲರಾಮ ಕೃಷ್ಣರು ಎದ್ದು ನಿಂತು |
ನಿಮಗೆ ಸಂಶಯಬೇಡ ವಸುದೇವರಾಣೆ ||388||

ವಚನ

ಅತ್ತಲಾ ದ್ರುಪದರಾಯ ಏನೆನುತ್ತಿದ್ದನೋ -

ರಾಗ ಪಾಡಿ ಏಕತಾಳ

ಧರಣೀಶರೈತಂದು ಧನುವೆತ್ತಲಾರದೆ |
ತಿರುಗಿದರಯ್ಯಯ್ಯೋ ವಿಧಿಯೆ |
ಸುರಪನಂದನನೆಂದು ಸುತೆಯನಾ ಪಡೆದೆನು ಅರಗಿನ ಗಹದಲ್ಲಿ ಪೋದ ||389||

ಇನ್ನು ಮಾಡುವುದೇನು ಈ ತೆರನಾದ ಮೇಲೆ |
ಬನ್ನಿರೋ ಬ್ರಾಹ್ಮಣರು ಇತ್ತಿತ್ತ |
ಚೆನ್ನಾಗಿ ಧನುವೆತ್ತಿ ಚಂದದಿಂದೊಪ್ಪುವ | ಕನ್ನೆಯ ಮದುವೆಯಾಗೆಂದ ||390||

ವಚನ

ಇಂತೆನಲಾಗಿ ಬ್ರಾಹ್ಮಣರು ಏನೆನುತಿದ್ದರೊ -

ತುಪ್ಪ ಶಾಕಗಳು ಅಪ್ಪಾಲು ಅತಿರಸ ಹಪ್ಪಳ ಸಂಡಿಗೆಯು ಪಾಯಸವಿದ್ದರೆ |
ಚಪ್ಪರಿಸಿ ತಿನ್ನುವುದಕೆ ಚದುರರು ನಾವು ||391||

ನೀತಿ ಶಾಸ್ತ್ರದಲ್ಲಿ ನಮ್ಮ ಮಾತನಾಡಿಸಿ ನೋಡು ಮತ್ತೆ ಚಲತ್ವಗಳ |
ಧಾತು ಪದಕ್ರಮ ಜಟೆಗಳಿಂದ ತರುಣಿಯ ಗೆಲ್ವೆವೆಂದು ವಿಪ್ರರು ನುಡಿದರು ||392||

ರಾಗ ದ್ವಿಪದಿ ಝಂಪೆತಾಳ

ಇಂತು ಹಾಸ್ಯದ ಮಾತ ಯಮಜ ಕೇಳಿದನು |
ಇಂದ್ರನಂದನಗೆ ಕಣ್ಸನ್ನೆ ಮಾಡಿದನು ||393||

ಆಗಳರ್ಜುನನೆದ್ದು ನಭಕೆ ಕೈಮುಗಿದು |
ನಾಗಶಯನಗೆ ನಮಿಸಿ ಬೇಗದಿಂ ನಡೆದು ||394||

ಬರುವದನು ಕಂಡು ಕಂಡು ಬ್ರಾಹ್ಮಣರು ಹಾಸ್ಯವಾಡೆ
ಅರಸರೆಲ್ಲರು ನೋಡಿ ಆಶ್ಚರ್ಯವಾಡೆ ||395||

ವಚನ

ಇಂತೀ ಬ್ರಾಹ್ಮಣರು ಏನೆನುತ್ತಿದ್ದರು -

ರಾಗ ಸೌರಾಷ್ಟ್ರ ಅಷ್ಟತಾಳ

ಭೂಸುರ ನಿನಗೇನು ಭ್ರಾಂತಿ ಹಿಡಿಯಿತೇನೋ ಮಾತ ಕೇಳು |
ಈ ಸುರಸತಿಯು ಬೇಕೆ ನಮ್ಮೊಳಿಲ್ಲವೆ ಹೆಣ್ಣು ಮಾತ ಕೇಳು ||396||

ಚೌಕದ ಮಣೆಯ ಮೇಲೊರಗಿ ಮಾಡಿಸಿ ಉಂಡ ಹಾಗಲ್ಲ ಕಾಣೊ |
ಬೇಕಾದ ಶಾಕವ ತುಪ್ಪದಲದ್ದಿ ಸವಿದುಂಡ ಹಾಗಲ್ಲ ಕಾಣೊ ||397||

ಜೋಕೆ ಶಾಲಿಗ್ರಾಮವನು ಪೂಜಿಪ ಹಾಗಲ್ಲ ಕಾಣೊ |
ಲೋಕೈಕ ವೀರರು ಧನುವ ಜಯಿಸಲಿಲ್ಲ ಬಾರೊ ಕಾಣೊ ||398||

ವಚನ

ಇಂತೆಂದು ಬ್ರಾಹ್ಮಣರು ಆಡಿದ ಮಾತಂ ಕೇಳಿ ಅರ್ಜುನ ಏನೆನುತಿದ್ದನೋ -

ರಾಗ ಶಂಕರಾಭರಣ ತ್ರಿವುಡೆತಾಳ

ಯಾಕೆ ಎನ್ನನು ಕಂಡು ನಗುವಿರಿ ।
ಎರಗುವೆನು ವಿಪ್ರೌಘಕೆ ॥
ಲೋಕದಲಿ ಬಡತನವು ಕಷ್ಟವು ಬೇಡಿಕೊಂಬೆನು ನಿಮ್ಮನು ॥399॥

ಉಟ್ಟ ಧೋತ್ರವು ಮಲಿನವಾದರೆ ।
ದಿಟ್ಟತನವದು ಮಲಿನವೆ ॥
ಭಟ್ಟನಾದರೆ ವಿಕ್ರಮವು ತಾ । ಮುಟ್ಟಲಿಲ್ಲವೆ ಭೂಸುರ ॥400॥

ನಂಟತನ ನಿಮ್ಮೊಳಗೆ ಸೇರಲು । ಬಂಟತನ ನಮಗಿಲ್ಲವೆ ॥
ಶುಂಠನೆಂದೆನುತೀಗ ನಗುವಿರಿ ।
ಉಂಟು ನಮಗತಿ ಪೌರುಷ ॥401॥

ನಿನ್ನ ಕೈಯಲಿ ಚೆನ್ನದುಂಗುರ । ಎನ್ನ ಕಯ್ಯ ಪವಿತ್ರವು ॥
ಎನ್ನ ನಿನ್ನಂತರವ ನೋಡುವ ।
ಚೆನ್ನಕೇಶವ ರಾಯನು ॥402॥

ವಚನ

ಅತ್ತಲಾ ನಾರಿಯರು ಏನೆನುತಿದ್ದರೂ -

ರಾಗ ಸೌರಾಷ್ಟ್ರ ತ್ರಿವುಡೆತಾಳ

ಇತ್ತ ನೋಡಲು ಬಾರದೇನಕ್ಕ ।
ಯಿತ್ತ ವಿಪ್ರರ ಸಭೆಯೊಳು ॥
ಚಿತ್ತಜನ ಪೋಲುವನು ದರ್ಭ ಪವಿತ್ರವನು ಧರಿಸಿರುವನು ॥403॥

ಚರಣ ಪರ್ಯಂತರವು ಧೋತ್ರವು ।
ಬದಿಯ ಜೋಲುವ ಕಚ್ಚೆಯು ।
ಸ್ಮರನ ನೋಡೆಲೆ ದ್ರುಪದ ನಂದನೆ ಅರರೆ ನಿನ್ನಯ ಭಾಗ್ಯವು ॥404॥

ಶಿರದೊಳಗೆ ಸಕಲಾತಿ ಮುಕುಟವು ।
ಕರದೊಳಗೆ ಜಪಸರಗಳು ।
ಧರಣಿ ಸುರವರನ ನೋಡಲೆ । ತರಳ ಪ್ರಾಯದ ಭಾಮಿನಿ ॥405॥

ನೆಲನ ನೋಡುವುದೇನು ಸೈರಿಸು ।
ಬಲು ಕುಶವ ಪೊತ್ತಿರ್ದನು ।
ಪುಲಿದೊಗಲ ಮುಚ್ಚಳದ ಪೆಟ್ಟಿಗೆಗಳನು ಕಂಕುಳೊಳಾಂತಿಹ ನೋಡೆಯಕ್ಕಾ ॥406॥

ವಚನ

ಇತ್ತಲಾ ಕೃಷ್ಣಸ್ವಾಮಿಯು ಬಲರಾಮನೊಡನೆ ಏನೆನುತಿದ್ದನೋ -

ರಾಗ ಮಾರವಿ ಏಕತಾಳ

ನೋಡಿದಿರೆ ಅಣ್ಣ ನೋಡಿದಿರೆ ।
ಇವ ನಾಡಾಡಿಯವನಲ್ಲ ನರನೈದಿಬಹುದನ್ನು ॥
ನೋಡಿದಿರೆ ಅಣ್ಣ । ನೋಡಿದಿರೆ ॥
ಭೂಸುರ ಸಭೆಯೊಳಗೆ । ಮಾಸಿದ ಧೋತ್ರವನುಟ್ಟು ।
ವೇಷವ ಮರಸಿ ಮೆಲ್ಲನೆ ಅಡಿಯಿಡುವಾತ ।
ವಾಸವಾಂಘ್ರಿಯರಿಗೆ ಈಶನೈಋತ್ಯ ವರುಣವಾಸ ಮರುತರಿಗೆ ।
ಶರಣೆಂಬಾತರ್ಜುನ ನೋಡಿದೆ ಅಣ್ಣ ॥407॥

ತಗಧಿತ್ತ ತಗಧಿತ್ತ ತಗಧಿತ್ತ ಎಂಬ ಗಣಿಕೆಯ ಸೊಗಸುನತ್ಯವ ನೋಡದೆಯಿತ್ತ ಯೀಕ್ಷಿಸು ।
ಜಗದೇಕವೀರ ಝಂ ಝಣ ಝಣ ಝಣರೆಂಬ ತಾಳದ ಬಗೆಯಂತೆ ಬಹುದನು ನಮ್ಮ ।
ನೋಡಿಹೆಯಣ್ಣ ನೋಡಿದಿರೆ ॥408॥

ವಚನ

ಅತ್ತಲಾ ಅರ್ಜುನ ಏನೆನುತ್ತಿದ್ದನೋ -

ರಾಗ ಭೈರವಿ ಪಂಚಘಾತ ಮಟ್ಟೆತಾಳ

ಬಿಲ್ಲ ಮೊದಲು ಒಪ್ಪುವಿಲ್ಲ ನನಗ್ರಜಗೆ । ನಿಲ್ಲ-ದೆರಗಿದ ।
ನಿಲ್ಲದೆರಗಿದ । ಕಲ್ಲನಾರಿಗೆ ಕೈವಲ್ಯವಿತ್ತಗೆ ।
ಮತ್ತಲ್ಲಿಯೆ ನಮಿಸಿದ । ಮತ್ತಲ್ಲಿಯೆ ನಮಿಸಿದ ॥409॥

ಎಲ್ಲರ ಹೊರೆವ ಗೌರೀ ದೇವಿಯ ವಲ್ಲಭಗೊಂದಿಸಿದ ।
ಬಲ್ಲಿದ ಕರ್ಣದಲ್ಲಣ ಪಾರ್ಥ ।
ಘುಲ್ಲೆಸಿ ಭುಜವನು ಘುಲ್ಲೆಸಿ ಭುಜವನು ॥410॥

ರಾಗ ಕಾಂಭೋಜಿ ಅಷ್ಟತಾಳ

ಇಂದ್ರನಂದನನು ಸಕಲರಿಗೆ ವಂದನೆಯೆಂದನು ।
ಮುದದಿಂದ ಧನುವೇರಿಸಿ ನಿಂದನು ॥
ಶರವನೆದೆಚ್ಚೆಸೆಯಲು ಯಂತ್ರಮತ್ಸ್ಯ ಧರೆಗೆ ಬೀಳಲು ।
ಪಾಂಚಾಲೆಗದ ಪೇಳಲು ।
ಆಗ ಕುಸುಮಶರನ ಪಟ್ಟದಾನೆಯಂದದಿ ಬೇಗ ।
ಬಂದಳು ಕೂಡೆ ನಿಂದಳು । ವರನ ಕಂಡಳು ॥
ಮತ್ತೆ ಅಸಮ ಸಾಹಸಗೆ ಪೂಮಾಲೆಯನಿಕ್ಕಿ ।
ಎಸೆವ ನಲ್ಲನ ನೋಡಿ ನಗುತ ಹಿಗ್ಗಿದಳು ।
ಇಂದ್ರನಂದನನು ಸಕಲರಿಗೆ ವಂದನೆಯೆಂದನು ॥411॥

ಕಂಡರು ಬುಧರೆಲ್ಲ ಸಂತೋಷದಿಂದ ।
ಬ್ರಾಹ್ಮರಿಗಿವನಿಂದ ಚಂಡತೇಜಗಳೆಂದರು ।
ಭುಜವ ಹೊಯ್ದು ನಿಂದರು ಭಲರೆಯೆಂದರು ।
ಭೂಮಂಡಲದೊಳಗೆಣೆಯಿಲ್ಲೆಂದು ಹಿಗ್ಗುತ ।
ಮಂಡೆ ಶಿಖೆಗೆ ನೇವರಿಸುತಲಿಹರಯ್ಯ । ಇಂದ್ರನಂದನನು ॥412॥

ವಚನ

ಇಂತೆಂದು ದ್ರೌಪದಿಯ ಅರಮನೆಗೆ ಕರಕೊಂಡು ಹೋದ ಮಾರ್ಗದಲ್ಲಿ ನಾರಿಯರು ಏನೆಂದು ಹಾಸ್ಯವಂ ಮಡುತ್ತಿದ್ದರೋ -

ರಾಗ ಶಂಕರಾಭರಣ ಏಕತಾಳ

ಅಕ್ಕ ಹಾರುವತಿಯೆಮ್ಮ ಗಹಕೆ ।
ಗಕ್ಕನೆ ಬರಬೇಡಿ ಸೊಕ್ಕ ಮುರಿವೆವು ।
ಚಿಕ್ಕ ಹರೆಯ ನಿನಗುಕ್ಕುವ ತಾಪಕ್ಕೆ ।
ತಕ್ಕ ನಲ್ಲನು ಬಂದ ಠಕ್ಕುಗಳೆಲ್ಲ ॥
ಅಕ್ಕ ಹಾರುವತಿಯೆಮ್ಮ ಗಹಕೆ ॥413॥

ಮನೆ ಮನೆ ತಪ್ಪದೆ ತಿರಿದುಂಬ ।
ಘನಭಾಗ್ಯದ ವರನ ನಲ್ಲನ ಕಂಡೆ ।
ದಿನಪನುದಯದಲೆದ್ದು ವನಧಿಗೆ ಪೋಗಿ ।
ಬಿನುಗರಂದದಿ ಮೀಯಲು ಬಹುದಮ್ಮ ॥
ಅಕ್ಕ ಹಾರುವತಿ ಯೆಮ್ಮ ಗಹಕೆ ॥414॥

ಮಾಂಸವ ಮೆಲುವ ಜನರು ನಾವೆಲ್ಲ ।
ಹಿಂಸೆಯೆ ನಿಮ್ಮ ಕುಲಕ್ಕದು ಸಲ್ಲ ।
ನಾವು ಸುಮ್ಮನೆಯಿದ್ದರೆ ತರವಲ್ಲ ।
ಕಂಸಾರಾತಿಯ ಮಹಿಮೆಯಿದೆಲ್ಲ ।
ಅಕ್ಕ ಹಾರುವತಿ ಯೆಮ್ಮ ಗಹಕೆ ॥415॥

ವಚನ

ಇಂತೆಂದು ದ್ರೌಪದಿಯ ಅರಮನೆಯ ಒಳಯಿಂಕೆ ಕರಕೊಂಡು ಪೋಗಲಾಗಿ । ಇತ್ತಲಾ ರಾಯ ರಾಯರು ಏನೆನುತಿದ್ದರು-

ರಾಗ ಕಾಂಭೋಜಿ ಅಷ್ಟತಾಳ

ಏನಿದು ಪಾಂಚಾಲ ಮಾಡಿದುದಿಂದು ।
ಮಾನವಾಧಿಪರೆಲ್ಲ ಕಂಡಿರೆಯಿಂದು ।
ಹೀನ ಹಾರುವನಿಗೆ ಹೆಣ್ಣನೆ ಕೊಟ್ಟು ।
ಮಾನಭಂಗವ ಮಾಡಿದ ಹೋಯಿತು ಗುಟ್ಟು ॥

ಏನಿರೋ ನೀವು ಕಂಡಿರೆ ॥416॥

ತರುಣಿಯ ನಾವಿತ್ತ ಎಳಕೊಂಡು ಬರುವ ।
ತಿರುಕ ಹಾರುವ ಮತ್ತೆ ತಿರಿದ್ದೊಟ್ಟೆ ಹೊರೆವ ।
ಕರಿರಥವೇರಿ ಸರಳ ಮಳೆಗರೆವ ।
ವರದುರ್ಗವನೆ ಮುತ್ತಿ ಬೇಗದಲ್ಲಿರಿವ ॥ ಏನಿರೋ ... ||417||

ನಮ್ಮನಿಲ್ಲಿಗೆ ಬರಹೇಳಲದೇಕೆ ।
ಹೆಮ್ಮೆಯಿಂದಿಳೆಯಲಿ ಧನು ತೋರನೇಕೆ ।
ಅಮ್ಮಮ್ಮ ನಮ್ಮೊಡನೆ ದ್ರುಪದ ಪರಾಕೆ ।
ಸುಮ್ಮನೆ ಹೋದರೆ ಪಂಥಸಾಕೆ ॥ ಏನಿರೋ ॥418॥

ವಚನ

ಇಂತೆಂದು ರಾಯರು ಪಾಂಚಾಲನ ಮೇಲೆ ದಂಡೆತ್ತಿ ಬಂದರದೆಂತೆನೆ -

ರಾಗ ದೇಸಿ ಏಕತಾಳ

ಬಾರಯ್ಯ ಮಗಧ ಭೂಪಾಲ ॥ ಧೀರ ಪಾಂಚಾಲ ।
ಬಾರಯ್ಯ ಮಗಧ ಭೂಪಾಲ ॥
ನೂರು ವರುಷ ತಲೆಯೂರಿ । ತಪದಿ ಕೈ
ಸೇರುವ ಬಾಲೆಯ ಹಾರುವನೊಯ್ದ । ಬಾರಯ್ಯ ॥
ವೀರತ್ವಗಳೆಲ್ಲ ಹಾರಿತೊ ನಮಗೇನು ।
ಕಾರಣ ತನ್ನಿರೊ ತೋರೋ ತೋರೋ ಮಾಲೆಗಳ । ಬಾರಯ್ಯ ... ||419||

ಅರಿಗಳ ತಿಮಿರ ಮಾರ್ತಾಂಡ ।
ಮಾರುತಿ ಚಂಡಕರ ತೇಜದಿ ಉದ್ದಂಡ ।
ಮರನ ಮುರಿದು ಶಲ್ಯನುರವ ಬಡಿದು । ಕೌರವ ಹಿಮ್ಮೆಟ್ಟಿಸಿ ।
ತಿರುಗಿ ಕುಲಾಲ ಮಂದಿರಕೈದಲು ॥420॥

ಏನೆಲೊ ಭೂಸುರ ನೀನಿಂಥ ಕನ್ನೆ ಮ
ದ್ದಾನೆಯನೊಡಗೊಂಡು ನೋಡುತ ।
ಕೋಣೆಯಲಿರ್ದರೆ ಕ್ಷೋಣೀಶರೆಲ್ಲರು
ಬಾಣದಲೆಸೆವರು ॥421॥

ವಚನ

ಇಂತೆಂದು ಆ ವೇಳ್ಯದಲ್ಲಿ ರಾಯರಾಯರು ಏನೆನುತಿದ್ದರು -

ರಾಗ ಭೈರವಿ ಪಂಚಘಾತ ಮಟ್ಟೆತಾಳ

ಸಣ್ಣ ಹರೆಯದೆಣ್ಣ ನೋಡುತ ।
ಹಣ್ಣ ಫಲವನುಣ್ಣದಂತೆ ನುಣ್ಣಗವನ ಕಣ್ಣಮುಂದೆ ॥422॥

ಬಣ್ಣಗಾತಿಯ ತರುವೆವು ಧಣ್ಣನೆಂದು ಬಾಣವೆಸೆಯೆ
ಕರ್ಣ ಸೆಳೆದು ಪೂರ್ಣವೆಸೆಯೆ । ॥423॥

ನಿಂತಿರಲು ಬೇಡವಿನ್ನಂತರಿಸದ ಮುನ್ನ ।
ನಂತಬಾಣಗಳ ಕುಂತೀಜಾತನೆಸೆಯಲು ॥424॥

ಪಾರ್ಥ ಸರಳ ಬಿಡಲು ಕಣರ್ ।
ಧುರವಿಂದಿಗೆ ಸಾಕು ಬೇಡ । ಕುರುಪತಿಯೆಂದಾಗ ॥425॥

ಇಂತೆಂದು ಕರ್ಣ ಸರಳುಗಳ ಎಸೆವುತಿರ್ದ ।
ಅಂತುರುಳಿತು ತಲೆ ಬಹಳ ॥426॥

ಮಾರಾಂತಮನ್ನೆಯರೆಲ್ಲ ನಿಂತು ಕಾದುತಿರೆ ॥427॥

ರಾಗ ದೇಶಿ ಏಕತಾಳ

ಬಾರಯ್ಯ ಕರ್ಣ ಕೇಳೆಂದನು । ನಮ್ಮ ।
ಊರಿಗೆ ಹೋಗುವ ನೀ ಸಾರು । ಕದನ ಬೇಡ ಬಾರಯ್ಯ ॥
ನಮ್ಮ ನಗರಕ್ಕೆ ಹೋಗುವ ದಮ್ಮಯ್ಯ ಎಂದನು ಕೌರವ ।

ನಾಳೆ ಸುಮ್ಮಾನದಿಂದ । ಇವನ ಹೆಮ್ಮೆ ಮುರಿವ ॥ ಬಾರಯ್ಯ ॥428॥

ವಚನ

ಇಂತೆಂದು ರಾಯರೆಲ್ಲ ಪೋಗಲಾಗಿ -

ರಾಗ ಮಾರವಿ ಝಂಪೆತಾಳ

ಅತಿ ಪ್ರೀತಿಯಿಂದಾನು ಅಗ್ನಿಯಲಿ ಪಡೆದ ।
ಸುತೆಯ ವಿಪ್ರ ಕರಕೊಂಡು ಪೋದ ॥429॥

ಮಗಳ ಸಂಗತದಲ್ಲಿ ಮತ್ತಾರುಯಿಲ್ಲ ।
ಮಗನೇತ್ರೆಯೇನೆಂದು ಮರುಗುವಳೋ ಬಲ್ಲ ॥430॥

ಸುಗುಣ ಧಷ್ಟದ್ಯುಮ್ನ ಸದ್ಯದಲಿ ಪೋಗು ।
ನಗುವಳೋ ನಮ್ಮೆಲ್ಲ ನೆನೆವಳೋ ಈಗ ॥431॥

ಕುಲನಾಲ್ಕರೊಳಗಾರು ಕುಶಲರೋ ಎಂದು ।
ಹಲವಂಗದಲಿ ತಿಳಿಯೋ ಹೋಗು ನೀನೆಂದು ॥432॥

ದ್ರುಪದಯಿಂತೆನಲು ಧಷ್ಟದ್ಯುಮ್ನ ಬೇಗ ।
ಗುಪಿತದಿಂದೈತಂದು ಗಳಿಗೆಯೊಳಗಾಗ ॥433॥

ತಿರುಗಿ ಬಂದನು ತನ್ನ ಪಿತನ ಬಳಿಗೆ ।
ಶಿರವೆರಗಿ ಪೇಳ್ದನಾ ಸುಗುಣನಾ ನಪಗೆ ॥434॥

ವಚನ

ಇಂತೆಂದು ದಷ್ಟದ್ಯುಮ್ನ ತನ್ನ ತಂದೆಯ ಪಾದಕ್ಕೆರಗಿ ಏನೆನುತಿದ್ದನೋ -

ರಾಗ ಸೌರಾಷ್ಟ್ರ ತ್ರಿವುಡೆತಾಳ

ಅರಸ ಭೂಮೀಸುರರು ವೇದವ । ನೊರೆವರಾ ಕ್ಷತ್ರಿಯರು ಸಂಗರ ।
ಪರಿಯ ಪೇಳ್ವರು । ಧಮಶಾಸ್ತ್ರವ ಕೇಳು ಪೇಳ್ವೆ ॥435॥

ಧನವಿವರ್ಧನ ಚಿಂತೆ ಪಣ್ಯಗೆ । ದಿನದಿನಕೆ ಕಷಿಮಾತು ಶೂದ್ರಗೆ ।
ಇನಿತು ಜಾತಿ ಸ್ವಭಾವ ಧರ್ಮವು ಲೋಕದೊಳಗೆ ॥436॥

ಇವರು ಕ್ಷತ್ರಿಯರದರೊಳಗೆ ಪಾಂ ।
ಡವರೆ ಯೋಚಿಸಬೇಡ ಹೋಗವರ ನೆಲೆಯನು ತಿಳಿದು ಬಂದೆನು ಎಂದನಾಗ ॥437॥

ಇನ್ನು ಕೇಳುವುದೇನು ಮೂಡಣ ಕನ್ನಿಕೆಯು ಕುಂಕುಮವನಿಟ್ಟಳು ।
ನಿನ್ನ ಮಗಳನು ಧಾರೆಯೆರೆ ನಪರನ್ನ ಎಂದ ॥438॥

ವಚನ

ಇಂತೆಂದು ಧಷ್ಟದ್ಯುಮ್ನ ನುಡಿದ ಮಾತಂ ಕೇಳಿ ದ್ರುಪದ ಮನಲಾಭದಿಂದ ಪಾಂಡವರಂ ಕರೆಸಲು, ಅವರೊಡನೆ ದ್ರುಪದ ಯೇನೆನುತಿದ್ದನೋ -

ರಾಗ ಮಾರವಿ ಏಕತಾಳ

ಚೆನ್ನಾಗಿ ಸ್ನಾನವ ಮಾಡಿರೋ । ಪುಣ್ಯಾರ್ಚನೆ ಮೈಗೆ ಕುಳ್ಳಿರೊ ।
ಚಿನ್ನ ಬಂಗಾರವ ತೊಡಿರೋಯೆಂದು । ಚೆನ್ನಾಗಿ ಸ್ನಾನವ ಮಾಡಿ ॥439॥

ವಚನ

ಇಂತೆಂದು ದ್ರುಪದ ಯೇನೆನುತಿದ್ದನೋ -

ರಾಗ ಮಾರವಿ ಝಂಪೆ

ನಿಮ್ಮ ಪಂಚಕದೊಳಗೆ ನಿನ್ನೆ ಧನುವೆತ್ತಿದ ।
ಚೆನ್ನಿಗ ನಾರಯ್ಯ । ಚದುರ ಬಾರಯ್ಯ ॥440॥

ಧಾರೆಯೆರೆವೆ ನಾನು ಧಾರುಣಿ ಸುರರಿಗೆ ಧೇನು ।

ಭೂರಿ ದಕ್ಷಿಣೆ ಕನಕ ಬೇಗ ಕೊಡಿಯೆನುತ ||441||

ಎನಲು ಓಂಕಾರಗಳು | ಎಸೆಯಲು ಬ್ರಾಹ್ಮರೊಳು |
ಘನವಾದ್ಯ ರಚನೆಗಳು ತುಂಬಿತು ಬಹಳ ||442||

ಮೆಟ್ಟಕ್ಕಿ ಹರಿವಾಣ ಮುಗುದೆವೆಂಗಳು ಪಿಡಿದು |
ಥಟ್ಟನೈತಂದರಾ ತದನಂತರದೊಳು ||443||

ವಚನ

ಇಂತೆಂದು ಸಿಂಹಾಸನಸ್ಥ ಪಾಂಡವರಂ ಕರೆಸಲು ಎದ್ದು ಬಹ ಬಗೆಯೆನದೆಂತೆನೆ -

ರಾಗ ಮಧುಮಾಧವಿ ಏಕತಾಳ

ಇಳಿದ ಧರ್ಮಜ ಮುಂದೆ | ಸುಳಿದ ಭೀಮನು ಹಿಂದೆ |
ಹೊಳೆದನರ್ಜುನನೊಂದೆ ಗಳಿಗೆ ಸಭೆಯೊಳಗೆ ||
ಉಳಿದ ಯಮಳರಂದು | ಥಳಿಲನಲ್ಲಿಗೆ ಬಂದು |
ನಿಲಲು ಪಾಂಚಾಲ ಗರ್ಜಿಸಿ ನೋಡಿ ನುಡಿದ ||444||

ಏನಿದ್ದೈವರು ನೀವು | ಎಸೆವ ಬಾಸಿಗ ಕಟ್ಟಿ |
ಆನಂದಿದೆದ್ದುದೇತಕೆಂದೆನುತ ||
ಓ ನಾರಿ ಯೆಮ್ಮೈವರಿಗೆ ವಧುವಾದಳಿನ್ನೇನೆಂಬೆನಯ್ಯ |
ಜನನಿಯ ವಾಕ್ಯದಿಂದ ||445||

ಅಸುರರೊ ಸುರರೊ ವಸುಧೆವಲ್ಲಭರೊ |
ಹಸನಾಗಿ ನೀವಾರು ಪೇಳಿರೈ ಎನಗೆ ||
ವಸುಮತೀಶನ ಮಾತ ಯಮಜ ಕೇಳಿದನು |
ಬಿಸಜನೇತ್ರನ ಪಾದ ಭಜಕರು ನಾವು ||446||

ಕರಿಪುರದರಸು ಪಾಂಡುವಿನ ಮಕ್ಕಳು ನಾವು |
ಧರಣಿ ಸುರರ ವೇಷದೊಳಗೆ ಬಂದಿಹೆವು ||
ಸುರಪನಂದನ ನಿನ್ನವರ ಕುಮಾರಿಯ ತಂದ |
ಅರಸನಾವೈವರು ನೆರೆವುದೆ ಸಿದ್ಧ ||447||

ವಚನ

ಇಂತೆಂದು ಪಾಂಡವರೆನಲು ದ್ರುಪದನ ಹರುಷ ಧ್ರುವಲೋಕಕ್ಕೆ ಪೋಗೆ | ಮಗಳಿಗೈವರು ವರರೆಂದಾಕ್ಷಣ | ದ್ರುಪದ ಏನೆನುತಿದ್ದನೋ -

ರಾಗ ದ್ವಿಪದಿ ಝಂಪೆತಾಳ

ಒಂದು ಗಂಡಿಗೆ ವನಿತೆಯರು ಬಹಳಹರು |
ಇಂದುಮುಖಿಯೋರ್ವಳೈವರಿಗೆಯಿಳೆಯೊಳು ||448||

ಮದುವೆಯನು ಮಾಡೆಂದು ಮಂತ್ರಶಾಸ್ತ್ರದೊಳು |
ವಿಧಿ ವಿಹಿತದಿಂದೊಡಂಬಡಿಸುವರೆ ಪೇಳು ||449||

ನೀವು ಪಾಂಡವರು ನೆರೆ ನೋಡಿ ನಡೆವವರು |
ಈ ವಸುಧೆಯೊಳು ಧರ್ಮಶಾಸ್ತ್ರವನು ನೋಡಿದವರು ||450||

ಎಂದ ಮಾತನು ಕೇಳಿ ಯಮಜ ನಸುನಗುತ |
ಇಂದ್ಯೆವರಿಗೆ ಧಾರೆಯೆರೆಯೊ ನರನಾಥ ||451||

ಇನಿತು ಮಾತನು ಕೇಳಿ ದ್ರುಪದ ಛಲಗೊಟ್ಟ |
ಕನಕ ಕಲಶವನು ಧಾರುಣಿಯೊಳಂದಿಟ್ಟು ||452||

ವಚನ

ಇಂತೆಂದು ತದನಂತರದಲ್ಲಿ ವೇದವ್ಯಾಸರು ಬರುತಿರ್ದರೆಂತೆನೆ -

ರಾಗ ಮೆಚ್ಚು ಬಹುಳ ಝಂಪೆತಾಳ

ಕಾವಿಯ ವಸ್ತ್ರವ ಧರಿಸಿ | ಕರಕಮಂಡಲ ಧರಿಸಿ |
ಭೂವರನ ಗಹವರಸಿ ಬರುತಿರ್ದ ತವಸಿ ||453||

ವರ ಮುನಿಗಳಂದು । ವ್ಯಾಸಮುನಿಯ ದಂಡು । ತಿರುಗಿ ಬರುತಿರೆ ಕಂಡು ।
ದ್ರುಪದ ಮುಂದೆ ನಿಂದು ॥454॥

ಮುನಿಯ ಚರಣಕೆ ತನ್ನ । ಮೌಳಿ ಎರಗುತ ಮುನ್ನ ।
ಜನಪನುಸುರುತ ಖಿನ್ನ । ನಿರುತಿರೆ ನಪನ ಬೆನ್ನ ॥455॥

ತಡವರಿಸಿ ಕರವಿಡಿದು । ತಾಳುಯೆಂದೆನುತೊರೆದು ।
ನುಡಿ ಚಿಂತೆ ಪರಿಹರಿದು । ಸುಜ್ಞಾನ ಮರೆದು ॥456॥

ವಚನ

ಇಂತೆಂದು ದ್ರುಪದರಾಯ ವ್ಯಾಸರೊಡನೆ ಯೇನೆನುತಿದ್ದನೋ -

ರಾಗ ಮೆಚ್ಚು ಬಹುಳ ಝಂಪೆತಾಳ

ಎನ್ನ ಬಿನ್ನಪವ ಕೇಳು । ವ್ಯಾಸ ಮುನೀಶ ।
ಕನ್ನೆಯೋರುವಳ ಕಾಮಿಸುತೈವರು ।
ಮುನ್ನ ಧಾರೆಯನೆರೆಯೆನ್ನ ಬಹುದೆ ಸ್ವಾಮಿ ।
ನಿನ್ನ ಮನಕೆ ಸರಿಯೆ ವ್ಯಾಸ ಮುನೀಶ ॥457॥

ಕೇಳು ಪಾಂಚಾಲಕನೆ । ಎಸೆವ ನಿನ್ನಯ ಕುವರಿ ।
ಭಾಳನೇತ್ರನದಯ । ವುಳ್ಳವಳು ಬಹಳ ।
ನಾರಾಯಣ ಋಷಿಗೆ ನಾರಿಯಾಗಿರುತಿರಲು ।
ನೀರೆ ಪತಿ ಭಕ್ತಿಯಲಿ ನಿತ್ಯ ಮೆಚ್ಚಿಪಳು ॥458॥

ತನ್ನ ಪತಿಯ ದೇವ ತನ್ನ ಪತಿಯ ದೈವ ।
ತನ್ನ ಪತಿಯ ಸೌಖ್ಯ । ಪತಿಯ ವರ ಸೌಖ್ಯ ।
ಎಂದು ಪೂರ್ವದ ಭವದಲಂದದಿಂ ನಡೆದು ।
ಹಿಂದಾದ ವಿವರಗಳನೆಂದಪೆನು ಕೇಳು ॥459॥

ವಚನ

ವ್ಯಾಸರು ದ್ರುಪದಗೆಯೇನೆನುತಿದ್ದರೂ -

ರಾಗ ಮಧುಮಾಧವಿ ಏಕತಾಳ

ಪತಿ ತನ್ನ ಸತಿಯ ಭಕುತಿಯನೆ ಕಂಡು ।
ಸತತ ಸುರತ ಸಾಂಗಯುತನಾಗಿ ಮೆರೆದ ।
ಅತಿ ಪ್ರೀತಿಯುತದಿಂದ ಸತಿಯಿಲ್ಲವೆಂದು ಪಾರ್ವತಿ ।
ಪಿತನ ತಪ್ಪಲಿಗೆಂದ ಮನತಂದು ॥460॥

ಚರಣ ಜಾನುಗುರುಗಳಲಿ ಶಿರಗಳಲಿ ।
ಥರಮಧ್ಯಧರ ಕುಷ್ಠಶರೀರ ತಾನಾದ ।
ಪರಿಯ ಕಂಡಳು ಕಾಂತೆ ಸರಸ ಚುಂಬನದಿ ।
ಎರವಿಲ್ಲದೆರಕದೊಳಿರುವಳದೆಂತೊ ॥461॥

ಮುನಿ ಕುಷ್ಠರೋಗವ ತಾಳಿದ ಮೇಲೆ ।
ಮಾನಿನಿ ಮತ್ತಾತನ ಹೆಚ್ಚು ಪೂಜಿಪಳಾಗ ।
ಇನಿತು ಹೇಸಿಕೆ ಕಂಡು ಬಿಡುವಳಲ್ಲೆಂದು ।
ದಿನವಾತ ಮಾಡಿದ ನೆನಹ ಕೇಳೆಂದ ॥462॥

ರಾಗ ಮಾರವಿ ಝಂಪೆತಾಳ

ಒಂದು ದಿನ ಮುನಿಸೇವ್ಯನೈತಂದು ।
ಮಿಂದು ಮಡಿದರ್ಘ್ಯವನು ಮಿಗೆಕೊಟ್ಟು ಬಂದು ॥463॥

ಸತಿಶಿರೋಮಣಿಯಾದ ಸದ್ಗುಣೆಯ ನೋಡಿ ।
ಯತಿರಾಜನೆಡೆಯೊಳಿರೆ ಅನ್ನವನು ಪ್ರೌಢೆ ॥464।

ಬಡಿಸಲಾಕ್ಷಣ ಸಂತೋಷದಿಂದುಂಡು ।
ಮಡನಮೋಯೆಂದೆಂಬ ಮಾನಿನಿಯ ಕಂಡು ॥465।

ಕೊಳೆವ ಬೆರಳನು ಭುಕ್ತ ಶೇಷದೊಳಗಿಟ್ಟು ।
ಘಳಿಲನೆದ್ದಾ ಗಂಡನದಕೊಡಂಬಟ್ಟು ॥466॥

ಬೆರಳ ಬೇರಿರಿಸಿ ಭೋಜನವ ಮಾಡುತಿರುವ ।
ತರುಣಿಯನು ಮುನಿಯರಿತ ತಾ ತವಕದಿರವ ॥467॥

ಏ ಮುದ್ದು ಮಾನಿನಿಯೆ ಏ ಪ್ರಾಣ ಸಖಿಯೆ ।
ಕಾಮಿನಿಯೆ ಮದ್ದಾನೆ ಕೇಳಿಂದುಮುಖಿಯೆ ॥468॥

ವಚನ

ಇಂತೆಂದು ಮುನಿಯೇನೆನುತಿದ್ದನೋ -

ರಾಗ ಕೇತಾರಗೌಳ ಏಕತಾಳ

ನಾರಿ ರಮಣಿ ಸುಗುಣಾಕರಿ । ಕೇಳೆನ್ನ ಮನವ ನೀನು ।
ಸೂರೆಗೊಂಡೆ ಬಾರೆ ಮೋಹನ್ನಕಾರೆ ॥469॥

ಎನ್ನ ಶರೀರದ ಹೇಸಿಕೆಯನು । ನೋಡದೆ ನೀನು ।
ಅನ್ನದೊಳಿದ್ದಂಗುಲಿಯನು ಬೇರಿಟ್ಟು ॥470॥

ಮುನ್ನ ಭೋಜನವ ಮಾಡಿದುದ ಕಂಡೆನು ಈಗ ।
ಇನ್ನೇನು ವರ ಬೇಕೆಂಬುದ ಕೊಡುವೆ ನಾನು ॥471॥

ಇಂತೆಂದು ಮಾತ ಪೇಳಲು ಕೇಳಿ ನಸುನಕ್ಕು ।
ರತಿಕಾಂತೆಯು ತನ್ನಿನಿಯಗೆ ಕಯ್ಯ ಮುಗಿದು ॥472॥

ಕಂತು ರೂಪ ನೀನಾಂತೆನ್ನ ಅಂತ ರಂಗದೊಳಿರ್ದು ।
ಸಂತತ ಸಲಹೊ ಯೆಂದೆರಗಿದಳು ಅಡಿಗೆ ॥473॥

ವಚನ

ಇಂತೆಂದು ತರಳಾಕ್ಷಿ ನುಡಿದ ಮಾತಂ ಕೇಳಿ । ಮುನಿ ಮದನ ರೂಪವಂ ಧರಿಸಿ ವರುಷ ಹತ್ತೆಂಟು ಪರ್ಯಂತವಳ ರಮಿಸಿ ಮುನಿ ತಪಕ್ಕೆ ಪೋದನದೆಂತೆನೆ – ತರುಣಿ ಬೆನ್ನಟ್ಟಿ ಬರಲಾಗಿ ತಡೆದಳೋ ತನ್ನರಸ ಬಾರೋ ಬಾರೆಂದೆನುತಲಿರೆ ಹರನಂ ಮೆಚ್ಚಿಸಲು ಗಿರಿಜಾತೆ ಸಹ ಬರುತಿರ್ದನದೆಂತೆನೆ -

ರಾಗ ಕೇತಾರಗೌಳ ಏಕತಾಳ

ನಂದಿ ಭಂಗಿ ವೀರಭದ್ರ । ಇಂದುಮುಖಿ ಗೌರಿದೇವಿ ।
ನಿಂದಿರಲು ಗಣನಾಥ ।
ಅಂದು ಈಕ್ಷಿಸಿ ಕರಿಚರ್ಮಾಂಬರ ಗಂಗಾಧರ ಹರ ಕಿರುಜಡೆ ಕರ್ಣದುರಗಾಭರಣದ ।
ಪೆರೆ ನೊಸಲ । ವರಭಸಿತದವನ । ಕೊರಳಗೊರಳಸುರ ।
ರರಸ ವಂದಿತಗೆ ಸರ್ವರು ನಮಿಸೆ ॥474॥

ವಚನ

ಇಂತೀ ಸದಾಶಿವ ಬಂದನದೆಂತೆನೆ -

ರಾಗ ಶಂಕರಾಭರಣ ಏಕತಾಳ

ಬಂದ ಕೈಲಾಸದಿಂದ ಶಿವಂ । ಸುರವಂದ ಮುನೀಶ್ವರ ವಂದವ ನೋಡುತ ।
ಬಂದ ಕೈಲಾಸದಿಂದ ಶಿವಂ ॥475॥

ನಂದಿವಾಹನ ಬಂದ । ನಿಟಿಲಲೋಚನ ಬಂದ ।
ಇಂದು ಶೇಖರ ಬಂದ । ಈಶ ಬಂದ ।
ಕಂದರ್ಪ ವೈರಿ ಬಂದ ॥ ಕತ್ತಿವಾಸನು ಬಂದ ।
ನಿಂದು ಭಜಿಸುವಳ ಮುಂದೆ ಸದಾಶಿವ ।
ಬಂದ ಕೈಲಾಸದಿಂದ ಶಿವಂ ॥476॥

ರಾಗ ಮಧುಮಾಧವಿ ಏಕತಾಳ

ನಿಂದು ಭಜಿಸುವಳ ಮುಂದೆ ಶಿವ ನಿಂದು ।
ಇಂದುಮುಖಿ ನಿನ್ನಯ ಅಂದವೇನೆಂದು ।
ಒಂದಾಗಿ ಬೆಸಗೊಳ್ಳಲಂದು ಮನದಂದು ।

ಇಂದುಮುಖಿ ಕನ್ನೆಯೆಂದುಸುರಿದಳು ||477||

ರಾಗ ಶಂಕರಾಭರಣ ಏಕತಾಳ

ಪತಿಯ ಕಾಣದೆ ಶಿವನೆ ಕಂಗೆಡುತಿದ್ದೆ |
ಪತಿಯ ಕಾಣದೆ ಶಿವನೆ ||
ಚಿಕ್ಕ ಪ್ರಾಯದಿಯೆನ್ನ ಮದುವೆಯಾಗಿ |
ದಕ್ಕಟ ದ್ವಿಜರನ್ನ |
ಹಕ್ಕಲ ಮನದಿ ಮೋಹಕರವಾದ ಮುನ್ನ ||
ಒಂದೆ ಕ್ಷಣದಿ ಬಿಡೆನು ಪತಿಯ |
ತಾನೊಂದೆ ಕ್ಷಣದೊಳಗೆ ||478||

ನಾಗಭೂಷಣನೆ ಕೇಳು | ನಾರಾಯಣ
ಯೋಗಿಯೆನ್ನಗಲಿದನು ||
ಈಗಿಲ್ಲ ತೋರುತಿದ್ದರೆ ಮಾಯವಾದ |
ಹೇಗೆ ತಾಳೆನೊ ಶಿವನೆ | ಮಾಯವಾದ | ಹೇಗೆ ತಾ ||479||

ರಾಗ ಮಾರವಿ ಝಂಪೆತಾಳ

ಪತಿಯ ಕೊಡು ಪತಿಯ ಕೊಡು ಪತಿಯ ಕೊಡು ಯೆನುತ |
ಸತಿ ಪಂಚ ವಾಕ್ಯದಿಂ ಪೇಳೆ ನಸುನಗುತ ||480||

ಶತಮಖಾರ್ಯನು ಐದು ಮಂದಿ ಪುರುಷರನು |
ಸತಿಗೆ ಕರುಣಿಸಿದ ಪಶುಪತಿಯಾದ ಶಿವನು ||481||

ಮಗಳೆ ಪೂರ್ವದೊಳೈವರಿಂದ್ರರಿರುತಿರಲು |
ಅಗಜೆಯಾತ್ಮಜೆಯೊಳು ಭೂಲೋಕದೊಳಗವರು ||482||

ಹಸ್ತಿನಾಪುರದರಸ ಪಾಂಡುವಾತ್ಮಜರು |
ವಿಸ್ತರಿಸುವೆನು ನಿನ್ನರಸಹರವರು ||483||

ರಾಗ ಮಧುಮಾಧವಿ ಏಕತಾಳ

ಹರ ಹರ ಮಾನುಷ ಜನ್ಮವೆಂಬುದೆ ಕಷ್ಟ |
ತರುಣಿ ರೂಪಾಂತಿಹುದೆ ಅತಿ ಕಷ್ಟ |
ಪುರುಷರೈವರಿಗೋರ್ವಳರಸಿಯಹುದು ಕಷ್ಟ |
ಪರಮೇಶ ನೀನಿಂಥ ವರವ ಕೊಡುವರೆ ||484||

ಮುನ್ನ ನಾನಾವ ನೋಂಪಿಯ ನೋಂತೆನೊ ಸ್ವಾಮಿ |
ಎನ್ನನು ದ್ಧರಿಸಯ್ಯ ಏ ಗುಣವರ್ಯ |
ಇನ್ನಾರು ಗತಿಯೆಂದು ರನ್ನ ಸಂಪನ್ನಯೆಂದೆನುತೆರಗಿದಳು ||485||

ವಚನ

ಇಂತೆಂದು ತರಳಾಕ್ಷಿ ನುಡಿದ ಮಾತಂ ಕೇಳಿ ಗಿರಿಜಾತೆಯೇನೆಂದು ನಿರೂಪಿಸುತ್ತಿದ್ದಳು -

ರಾಗ ಕೇತಾರಗೌಳ ಏಕತಾಳ

ನಾರಿ ನಿನ್ನ ನಿಂದಿಪರು ಜಗದಿ ಕುಂಭೀಪಾಕದಿ |
ಭರದಿಂದ ಲೋಲಾಡುವರು ||
ಪರಮ ಪತಿವ್ರತೆ | ವರ ದ್ರುಪದನ ಸುತೆ |
ಗಿರಿಜೆಯ ಸನ್ನುತೆಯೆಂದು ||486||

ಅರಿಯದೆ ನಿನ್ನ ಕಂಡರೆ ಮತ್ತೆ |
ಸ್ಮರಿಸುವರು ಪತಿವ್ರತೆಯಾಗಿಹರು ||
ಮರೆಯದೆ ನಿನ್ನ ಚರಿತವನ್ನು ಹೇಳಲು ಪಾಪ
ಹರಿದು ಹೋಗಲಿಯೆಂದು ಗಿರಿಜಾತೆ ಪೇಳಿದಳು ||487||

ವಚನ

ಇಂತೆಂದು ನಂದಿ ಭಂಗಿ ವೀರಭದ್ರ ಷಣ್ಮುಖ ಗಣಪ ಭೂತಗಣಂಗಳು ಗಿರಿಜೆ ಸದಾಶಿವಂ ತನ್ನ ಪುರಕ್ಕಂ ಪೋಗಲು | ಇತ್ತಲಾ ದ್ರುಪದೆಗೆ ಹೇಳಿ ತನ್ನ ಆಶ್ರಮಕ್ಕೆ ವ್ಯಾಸರು ತೆರಳಿ ಪೋಗಲಾಗಿ | ಇತ್ತಲಾ ದ್ರುಪದ ಪಾಂಡವರಂ ಕರೆದು ದ್ರೌಪದಿಯ ಧಾರೆಯನೆರೆವೆನೆಂದು ಸಿದ್ಧಾಂತವಂ ಮಾಡಿದನದೆಂತೆನೆ -

ರಾಗ ದ್ವಿಪದಿ ಝಂಪೆತಾಳ

ಇಂದುವದನೆಯರ ವಂದವೈತರಲು ।
ಚಂದದಿಂ ದ್ರುಪದನ ಹೆಂಡಿರೆಸೆಯಲು ॥488॥

ಆಗಳಾ ಧರ್ಮಜಾದಿಗಳನೆಲ್ಲ ಕರೆದು ।
ಭೀಮ ಪಾರ್ಥರನೆಲ್ಲ ಯಮಳರಂ ಕರೆದು ॥
ಆಗ ದ್ರೌಪದಿಯ ಧಾರೆಯೆರವೆಯೆನಲು ॥489॥

ವಚನ

ಆ ಸಮಯದಲ್ಲಿ ಅತ್ರಿ ಮರೀಚಿ ಕಣ್ವ ಕಾಶ್ಯಪ ಭಗು ಭಾರದ್ವಾಜ ವಸಿಷ್ಠ ವಿಶ್ವಾಮಿತ್ರ ಇಂದ್ರ ಚಂದ್ರ ದ್ವಾದಶಾತ್ಮಕ ಇಂತಿವರ ಕೂಡಿ ಪಾಂಚಾಲ ವಿವಾಹಮಂ ಮಾಳ್ಪನೆಂದು ಕೇಳಿ ಬಂದನದೆಂತೆನೆ-

ರಾಗ ದ್ವಿಪದಿ ಝಂಪೆತಾಳ

ಇಂದುವದನೆಯರ ವಂದವೈತರಲು ।
ಚಂದದಿಂ ದ್ರುಪದನಾ ಹೆಂಡಿರೈ ತರಲು ॥490॥

ಲಗ್ನವೈತರೆ ಧರ್ಮರಾಯನಂ ಕರೆದು ।
ತಮ್ಮ ಭೀಮ ಪಾರ್ಥರಿಗೊರೆದು ಯಮಳರಂ ಕರೆದು ॥491॥

ದ್ರೌಪದಿಯ ಧಾರೆಯೆರೆದನು ದ್ರುಪದ ।
ಪುಣ್ಯತತಿಯಾಗುತ್ತ ಮೆರೆದ ॥492॥

ವಚನ

ಇಂತೆಂದು ದ್ರೌಪದಿಯ ಪಾಂಡವರಿಗೆ ದ್ರುಪದ ಧಾರೆಯನ್ನೆರೆಯಲಾಗಿ । ನಾರಿಯರು ಮಂಗಲೋತ್ಸವಮಂ ಪಾಡಿದರದೆಂತೆನೆ -

ಧವಳಾರ

ಅಂಗನೆಯರೆಲ್ಲರು ಕೂಡಿ । ಮಂಗಳ ಧವಳವ ಪಾಡಿ ।
ಮಂಗಳ ಧವಳವ ಪಾಡಿ ॥
ಅಂಗನೆಯರೆಲ್ಲರು ನೆರೆದಾರತಿಯನೆತ್ತಿದರೆ ಶೋಭಾನೆ ॥493॥

ಮದುಮಕ್ಕಳೈವರ ಕುಳ್ಳಿರಿಸಿ । ಸುದತಿ ದ್ರೌಪದಿಯಲ್ಲುದಿಸೆ ।
ಸುದತಿ ದ್ರೌಪದಿಯಲ್ಲುದಿಸೆ ।
ಚದುರೆಯರೆಲ್ಲರು ನೆರೆದಾರತಿಯನೆತ್ತಿದರೆ ಶೋಭಾನೆ ॥494॥

ಭೂಸುರರೆಲ್ಲರು ನೆರೆದು । ಆಶೀರ್ವಾದಗಳ ಮಾಡೆ ।
ಆಶೀರ್ವಾದಗಳ ಮಾಡೆ ।
ಆ ಸುಗುಣರೆಲ್ಲರು ಮಂತ್ರಾಕ್ಷತೆ ಮಾಡಿದರೆ ಶೋಭಾನೆ ॥495॥

ಮಂಗಳಂ ಜಯಮಂಗಳಂ ।
ಮಂಗಳಂ ಪಾಂಡವ ಕುಮಾರರಿಗೆ ।
ಮಂಗಳಂ ದ್ರೌಪದಿ ಪತಿವ್ರತೆಗೆ । ॥496॥

ಮಂಗಳಂ ದ್ರುಪದೇಂದ್ರಪಾದ ಶರಣರಿಗೆ ।
ಮಂಗಳಂ ಪುರಂದರ ವಿಠಲ ರಾಯಗೆ

ಮಂಗಳಂ ಜಯ ಮಂಗಳಂ । ಸದಾ ಶುಭ ಮಂಗಳಂ ॥ ॥497॥

॥ ಸಂಪೂರ್ಣಂ ॥